# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ

| ಸಂಘದ ಸದಸ್ಯರಾಗಿ | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |

ಸಂಪುಟ : 9 ಸಂಚಿಕೆ : 1 ಖಾಸಗಿ ಪ್ರಸಾರಕ್ಕಾಗಿ ಜನವರಿ–ಮಾರ್ಚ್ 2019




## ಅರ್ಪಣೆ

ಈ **"ಬೃಹಚ್ಚರಣ"** ಸಂಚಿಕೆಯನ್ನು ನಮ್ಮ ಸಮುದಾಯದ ಹಿತೈಷಿಗಳಾಗಿದ್ದ **ವೇ॥ಬ್ರಾ॥ಶ್ರೀ॥ ನಂಜುಂಡ ದೀಕ್ಷಿತರಿಗೆ** ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಲಾಗಿದೆ.

## ನಾಗಾರಾಧನೆ ವಿಶೇಷಾಂಕ



## ಅಧ್ಯಕ್ಷರ ನುಡಿ

ಆತ್ಮೀಯರೇ ನಮಸ್ಕಾರ,

ಮುಂಬರುವ 'ವಿಕಾರಿ' ಸಂವತ್ಸರವು ಸಮುದಾಯದ ಎಲ್ಲಾ ಕುಟುಂಬ ಸದಸ್ಯರಿಗೆ ಶುಭ ತರಲೆಂದು ಹಾರೈಸುತ್ತೇನೆ.

ಆನೇಕಲ್ಲು ತಾ॥ ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ 11–03–19ರಂದು ನಡೆದ ನಾಗಾರಾಧನೆ ಹಾಗೂ 12–03–19ರಂದು ನಡೆದ ಶ್ರೀ ಶ್ರೀನಿವಾಸ ದೇವರ ರಥೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದಗಳು.

ಸಂಘಕ್ಕೆ ವಾರ್ಷಿಕ ನಿರ್ವಹಣಾ ವೆಚ್ಚ ನೀಡಿರುವವರಿಗೆ ವಂದಿಸುತ್ತಾ ನೀಡಬೇಕಿರುವ ಸದಸ್ಯರು ಆದಷ್ಟು ಬೇಗ ನೀಡಬೇಕೆಂಬ ಕೋರಿಕೆ. ಬಿಡುಗಡೆಯಾದ 2019ರ ವಾರ್ಷಿಕ ದಿನಚರಿಯ ಪ್ರಾಯೋಜಕರಿಗೆ ಧನ್ಯವಾದ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೂತನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಂಘವು ಅಭಿನಂದಿಸುತ್ತದೆ.

ಸಂಘದ ಹಿತೈಷಿಗಳಾಗಿದ್ದ ವೇ॥ಬ್ರಾ॥ಶ್ರೀ॥ ನಂಜುಂಡ ದೀಕ್ಷಿತರು ನಮ್ಮನ್ನಗಲಿರುವುದಕ್ಕೆ ಸಂತಾಪ ಸೂಚಿಸುತ್ತಾ, ಈ ಸಂಚಿಕೆಯನ್ನು ಶ್ರೀಯುತರಿಗೆ ಗೌರವದಿಂದ ಅರ್ಪಿಸಲಾಗಿದೆ.



**ಸೋಮಸುಂದರ**
ಅಧ್ಯಕ್ಷರು

ಆತ್ಮೀಯ ಸದಸ್ಯರೇ,

ದಿನಾಂಕ 09–05–2019ರಂದು ಶ್ರೀ ಶಂಕರ ಜಯಂತಿಯ ಪ್ರಯುಕ್ತ ಬೃಹಚ್ಚರಣ ಸಂಘದ ವತಿಯಿಂದ ಸಂಗೀತ ಕಾರ್ಯಕ್ರಮವನ್ನು ಬಸವನಗುಡಿಯ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಸಂಗೀತ ಕಲಾವಿದರು ಶ್ರೀಮತಿ ಸರಸ್ವತಿ ನಟರಾಜನ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ. (9480619730)

* * *

2019–2020ರ ಸಂಘದ **ಸರ್ವಸದಸ್ಯರ ಸಭೆಯನ್ನು** ದಿನಾಂಕ 07–07–2019 ಭಾನುವಾರ ಬಸವನಗುಡಿಯ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿರುವ "ಭ್ರಮರಾಂಬ ಮಂಗಳ ಸದನ"ದಲ್ಲಿ ನಡೆಸಲು ಕಾರ್ಯಕಾರಿ ಸಮಿತಿಯು ತೀರ್ಮಾನಿಸಿದೆ.

**ಎಂ.ಎಂ.ಡಿ.ಬಿ.ಎಸ್.**

## ಸಂಪಾದಕೀಯ

ಮಾನ್ಯರೇ ನಮಸ್ಕಾರ,

ಬೃಹಚ್ಚರಣ ಪತ್ರಿಕೆಯ ಬಗ್ಗೆ ಮೆಚ್ಚುಗೆ ತಿಳಿಸಿರುವ ನನ್ನ ಆತ್ಮೀಯರೆಲ್ಲರಿಗೆ ವಂದನೆಗಳು. ಲೇಖನ, ಛಾಯಾಚಿತ್ರಗಳನ್ನು ಕಳುಹಿಸುತ್ತಿರುವ ಬಂಧುಗಳಿಗೆ ನಮ್ರತೆಯ ನಮನಗಳು. ತಮ್ಮ ಸಹಕಾರ ಹೀಗೆ ಮುಂದುವರೆಯಲೆಂದು ಬಯಸುತ್ತೇನೆ.

Email : mmdbs.mag@gmail.com



**ಕೆ.ಸಿ. ನಟರಾಜ್**
ಸಂಪಾದಕ



# ವಾರ್ತಾ ಚಿತ್ರಗಳು



2019ರ ಬೃಹಚ್ಚರಣ ಕ್ಯಾಲೆಂಡರ್ ಬಿಡುಗಡೆಯ ಸಂದರ್ಭ



ಸಮುದಾಯದ ಹಿರಿಯ ಚೇತನ ಡಿ.ವಿ.ಜಿ.ಯವರ
132ನೇ ಜನ್ಮದಿನದ ಆಚರಣೆ



ಸಂಘದ ಪೋಷಕ ಶ್ರೀ ಆರ್.ಎಸ್. ರಾಜಗೋಪಾಲ್‌ರವರ ಪುತ್ರ
ಡಾ. ಆರ್. ಶ್ರೀನಾಥ್ (ಎಡದಿಂದ ಮೂರನೆಯವರು) ಭಾರತೀಯ
ಸೇನೆಯಲ್ಲಿ ಕರ್ನಲ್ ಹುದ್ದೆಗೆ ಬಡ್ತಿ ಹೊಂದಿರುತ್ತಾರೆ



ಸದಸ್ಯ ಶ್ರೀ ಬದರಿ ನಾರಾಯಣರವರ ಪುತ್ರಿ ಡಾ॥ ಮೇಘನಾ
ಫಿಸಿಯಾಲಜಿ ಮತ್ತು ಮೈಕ್ರೋಬಯಾಲಜಿ ವಿಭಾಗದಲ್ಲಿ
ಪಿಹೆಚ್.ಡಿ ದರ್ಜೆಯಲ್ಲಿ ದ್ವಿತೀಯ ಸ್ಥಾನ ಗಳಿಸಿರುತ್ತಾರೆ



ಮೈಲಾರಲಿಂಗೇಶ್ವರ ಟ್ರಸ್ಟ್ ವತಿಯಿಂದ ನಡೆದ ಸಂಗೀತ ಕಾರ್ಯಕ್ರಮದಲ್ಲಿ
ಸಂಘದ ಸದಸ್ಯ ಶ್ರೀ ಪ್ರಶಾಂತ್ ಹಾಗೂ ಅವರ ಪುತ್ರ ಚಿ॥ ಆದಿತ್ಯ ರಾಮ್



ಸಂಘದ ಪೋಷಕ ಖಂಜಿರ ವಿದ್ವಾನ್ ಗುರುಪ್ರಸನ್ನರವರ ಸಂಗೀತ ಕಛೇರಿ



ಗಿರಿನಗರ ಸಂಗೀತ ಸಭಾ ವತಿಯಿಂದ
ಶ್ರೀಮತಿ ಸರಸ್ವತಿ ನಟರಾಜ್ ಅವರನ್ನು
ಸಂಗೀತ ಕ್ಷೇತ್ರದಲ್ಲಿನ ಸೇವೆಗಾಗಿ ಗೌರವಿಸಲಾಯಿತು

**ಮೈ.ಮಂ.ದ್ರಾ. ಬೃಹಚ್ಚರಣ ಸಂಘ**
(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ)
**ಕಾರ್ಯಕಾರಿ ಸಮಿತಿ**

ಶ್ರೀಯುತರು

ಅಧ್ಯಕ್ಷರು
**ಎಸ್. ಸೋಮಸುಂದರ, 9900113298**

ಕಾರ್ಯಾಧ್ಯಕ್ಷರು
**ಎಚ್.ಕೆ. ಶಶಿಧರ್, 9845173766**

ಉಪಾಧ್ಯಕ್ಷರು
**ಎಸ್.ಸಿ. ಶ್ರೀನಿವಾಸ, 9845376949**

ಕಾರ್ಯದರ್ಶಿ
**ವಿ.ಎಸ್. ಮಣಿ, 9845055582**

ಸಹಕಾರ್ಯದರ್ಶಿಗಳು
**ಅರುಣ್ ವಿ., 9880166001**
**ಟಿ.ಎನ್. ರವಿಕಿರಣ್, 9972677005**

ಖಜಾಂಚಿ
**ಎಸ್. ಸತ್ಯನಾರಾಯಣ, 9980945699**

ಗೌರವ ಸದಸ್ಯರು
**ಕೆ.ಜಿ. ವೆಂಕಟೇಶ್, 9964012687**
**ಮಂಜುನಾರಾಯಣ್ ಕೆ. 9886114279**
**ಸರಸ್ವತಿ ನಟರಾಜನ್, 9480619730**
**ಆರ್. ಗಣೇಶ್ ಶ್ರೀಧರ್, 9880187686**
**ಟಿ.ಪಿ.ಸೂರ್ಯನಾರಾಯಣ, 9945484268**
**ಟಿ. ನಾಗೇಶ್, 9980662118**
**ಟಿ.ಎಸ್. ರಮೇಶನ್, 9663874531**
**ಕೆ.ಬಿ.ಎಸ್. ಶರ್ಮ, 94820 87344**
**ಶಂಕರಪ್ರಸಾದ್ ಬಿ.ಆರ್., 9845663833**
**ಸುಬ್ರಹ್ಮಣ್ಯಂ ಬೆಂಗಳೂರು, 9449869667**
**ಕೆ. ಗುಂಡಪ್ಪ, 9845332315**
**ಅರುಣ್ ಸೇತುರಾಮ್, 9900313929**
**ನಿತಿನ್‌ಭಾಸ್ಕರ್, 9844417333**

ಲೆಕ್ಕಪರಿಶೋಧಕರು
**ಬಿ.ಎನ್.ಜಿ. ಪ್ರಸಾದ್, 9845128229**

**ಗೌರವ ಸಂಪಾದಕ ಮಂಡಳಿ–ಬೃಹಚ್ಚರಣ ಪತ್ರಿಕೆ**
**ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ**
**ಬೆಂಗಳೂರು ಸುಬ್ರಹ್ಮಣ್ಯಂ, 9449869667**
**ಕೆ.ಸಿ. ನಟರಾಜ್, 9845113475**

ಸಂಪಾದಕರು
**ಲಲಿತಾ ರಮೇಶ್, 9945199637**

ಉಪಸಂಪಾದಕಿ
**ಶಿವಕುಮಾರ್ ಎನ್. 6362337254**

ಛಾಯಾಗ್ರಾಹಕ

# ನಾಗಾರಾಧನೆ – 2019



**ಆ**ನೇಕಲ್ಲು ತಾಲ್ಲೂಕು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ನಾಗಾರಾಧನೆಯು ದಿನಾಂಕ 11–03–2019, ಸೋಮವಾರದಂದು ವೈದಿಕ ಸಂಪ್ರದಾಯದಂತೆ ನೆರವೇರಿತು. ಈ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ನಾಗರ ಕಲ್ಲುಗಳಿಗೆ ಅಂದು ಪ್ರಾತಃಕಾಲದಿಂದ ಬೃಹಚ್ಚರಣ ಸಮುದಾಯ ದವರು ವಿಶೇಷವಾಗಿ ಬ್ರಹ್ಮಚಾರಿಗಳಿಗೆ ಪಾದಪೂಜೆ ಮಾಡಿ ಬಾಲಸುಬ್ರಹ್ಮಣ್ಯ ದೇವನ ಪ್ರತಿರೂಪವೆಂದು ದಕ್ಷಿಣೆ, ತಾಂಬೂಲ, ವಸ್ತ್ರ ಸಮರ್ಪಿಸಿ ಧನ್ಯರಾದರು.

ಪುನಃ ನವೀಕರಿಸಲ್ಪಟ್ಟಿರುವ ಶ್ರೀ ಶ್ರೀನಿವಾಸ ದೇವಸ್ಥಾನದಿಂದ ವಳ್ಳಿ–ದೇವಸೇನಾ ಸಮೇತ ಸುಬ್ರಹ್ಮಣ್ಯ ಉತ್ಸವಮೂರ್ತಿವನ್ನು ಮಂಗಳವಾದ್ಯ ದೊಂದಿಗೆ ನಾಗರಕಟ್ಟೆಗೆ ಸಮುದಾಯದವರು ಮೆರವಣಿಗೆಯಲ್ಲಿ ತಂದು ಸ್ಥಾಪಿಸಿದರು. ಈ ಬಾರಿಯೂ ಭಕ್ತಾದಿಗಳಿಗೆ ಬೆಳಗಿನ ಉಪಹಾರ ಏರ್ಪಡಿಸಲಾಗಿತ್ತು.

ಇದೇ ಸಂದರ್ಭದಲ್ಲಿ ರಾಜಾಪುರ ಆರ್. ಕೃಷ್ಣಮೂರ್ತಿ ಮನೆಯವರು, ಆರ್. ಗೋಪಾಲರಾವ್ ಮನೆಯವರು ಪ್ರತಿ ವರ್ಷದಂತೆಯೇ ಈ ವರ್ಷವೂ ಪಾನಕ, ಕೋಸಂಬರಿ, ಹುಳಿಯವಲಕ್ಕಿಯನ್ನು ಪ್ರಸಾದ ರೂಪದಲ್ಲಿ ವಿತರಿಸಿದರು.

ಎಸ್. ಛಾಯಾಪತಿ ಮತ್ತು ಕುಟುಂಬದವರು ಹೂವಿನ ಸೇವೆ ಸಲ್ಲಿಸಿದರು. ಕೆ.ಆರ್. ಪುರದ ನಾರಾಯಣೀ ಭಜನಾ ಮಂಡಳಿಯಿಂದ ಭಜನಾ ಸೇವೆ ನಡೆಯಿತು. ಇದೇ ಸಂದರ್ಭದಲ್ಲಿ ಅನ್ನದಾನಕ್ಕೆ ದೇಣಿಗೆ ನೀಡಿದ ಸದಸ್ಯರ ಹೆಸರುಗಳನ್ನು ಸಂಕಲ್ಪ ಮಾಡಿ ದೇವರುಗಳಿಗೆ ಪೂಜೆ, ಅಭಿಷೇಕ, ಅಲಂಕಾರ ನೆರವೇರಿಸಲಾಯಿತು. ಮಹಾಮಂಗಳಾರತಿ ನಂತರ ಸಮಸ್ತ ಭಕ್ತಾದಿಗಳಿಗೆ ಪ್ರಸಾದ, ಭೋಜನದ ವ್ಯವಸ್ಥೆ ಮಾಡಲಾಯಿತು.

ಬೃಹಚ್ಚರಣ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು, ವಿಶೇಷವಾಗಿ ಕಿತ್ತಿಗಾನಹಳ್ಳಿಯಲ್ಲಿ ನೆಲೆಸಿರುವ ಸಂಘದ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿ, ಖಜಾಂಚಿ ಶ್ರೀ ಎಸ್. ಸತ್ಯನಾರಾಯಣ ಹಾಗೂ ಶ್ರೀ ಟಿ.ಎಸ್. ಮಣಿ ಕುಟುಂಬದವರು ಹೆಚ್ಚಿನ ಆಸ್ಥೆ ತೋರಿಸಿ ಕಾರ್ಯಕ್ರಮ ಸುಗಮವಾಗಿ ನೆರವೇರಲು ಸಹಕರಿಸಿರುವುದಕ್ಕೆ ಧನ್ಯವಾದಗಳು.

ಸಮುದಾಯದ ಸದಸ್ಯರಿಗಾಗಿ ಈ ಬಾರಿ ರಿಯಾಯಿತಿ ದರದಲ್ಲಿ ಒಂಟಿಕೊಪ್ಪಲ್ ಪಂಚಾಂಗವನ್ನು ವಿತರಿಸಲಾಯಿತು. ಬೆಂಗಳೂರು ಹೊಸೂರು ಮುಖ್ಯರಸ್ತೆಯಿಂದ ಶ್ರೀ ನಾಗೇಶ್ವರ ಕ್ಷೇತ್ರದ ಕಡೆಗೆ ಇರುವ ರಸ್ತೆಯು ದುಃಸ್ಥಿತಿಯಲ್ಲಿದೆ. ಸಂಬಂಧಿಸಿದವರು ಈ ರಸ್ತೆಯ ಡಾಂಬರಿಕರಣ ಮತ್ತು ಶ್ರೀ ಕ್ಷೇತ್ರವನ್ನು ನಿರ್ದೇಶಿಸುವ ಫಲಕವೊಂದನ್ನು ಸೂಕ್ತ ಸ್ಥಳದಲ್ಲಿ ಅಳವಡಿಸಬೇಕೆಂದು ಸಂಘದ ಸದಸ್ಯರಿಂದ ಒಮ್ಮತ ಅಭಿಪ್ರಾಯ ವ್ಯಕ್ತವಾಯಿತು.



◆ **ಲಲಿತಾ ರಮೇಶ್**
**9945199637**

ಅರ್ಪಣೆ

# ವೇ॥ ಬ್ರ॥ ಶ್ರೀ॥ ಪ್ರೊ॥ ನಂಜುಂಡ ದೀಕ್ಷಿತರು



ಬೃಹಚ್ಚರಣ ಸಮುದಾಯದವರಿಗೆ ಕಿತ್ತಿಗಾನಹಳ್ಳಿ ಎಂದೊಡನೆ ನೆನಪಿಗೆ ಬರುವುದು ನಾಗೇಶ್ವರ ಕ್ಷೇತ್ರ, ಶ್ರೀ ಶ್ರೀನಿವಾಸ ದೇವಾಲಯ ಹಾಗೂ ದಿವಂಗತ ಶ್ರೀ ಶಾಮಣ್ಣ ದೀಕ್ಷಿತರು ಮತ್ತು ಅವರ ಕುಟುಂಬದವರು.

**ವೇ॥ ಬ್ರ॥ ಶ್ರೀ॥ ಪ್ರೊ॥ ಬಿ.ಎಸ್. ನಂಜುಂಡ ದೀಕ್ಷಿತರು**

ಶ್ರೀಯುತರು ದಿನಾಂಕ 05.09.1942 ರಂದು ಶ್ರೀಮತಿ ಪಾರ್ವತಮ್ಮ ಹಾಗೂ ಶ್ರೀ ಶಾಮಣ್ಣ ದೀಕ್ಷಿತರ ಹಿರಿಯ ಪುತ್ರನಾಗಿ ಜನಿಸಿದರು. ಚಿಕ್ಕಂದಿನಲ್ಲಿ ತಮ್ಮ ತಾಯಿಯವರನ್ನು ಕಳೆದುಕೊಂಡ ನಂತರ, ಬಾಲ್ಯವನ್ನು ತಾತನವರಾದ ಕಾಡುಗುಡಿಯ ಶ್ರೀ ಶಂಕರ ದೀಕ್ಷಿತರ ಮನೆಯಲ್ಲಿ ಕಳೆದರು. ಮಾಲೂರಿನಲ್ಲಿ ಪ್ರೌಢ ಶಿಕ್ಷಣ ಪಡೆದ ನಂತರ, ಮೈಸೂರಿನಲ್ಲಿ ಉನ್ನತ ವ್ಯಾಸಂಗದ ನಂತರ, ಮೈಸೂರಿನ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಶೈವಾಗಮ ಅಭ್ಯಾಸದಲ್ಲಿ ಪರಿಣಿತಿ ಪಡೆದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇತಿಹಾಸ ವಿಭಾಗದಲ್ಲಿ ಎಂ.ಎ. ಪದವಿಯನ್ನು ಗಳಿಸಿದರು.

1963 ರಿಂದ ಹಲವು ವರ್ಷಗಳ ಕಾಲ ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ಕಾಕತಾಳೀಯ ಎಂಬಂತೆ ಶಿಕ್ಷಕರ ದಿನದಂದು ಜನಿಸಿದ ಇವರು ಪ್ರಾರಂಭದಲ್ಲಿ ಹಲವು ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದು ವಿಶೇಷವೇ ಸರಿ.

ದಿನಾಂಕ 13.03.1969 ರಂದು ಅಮೃತೂರಿನ ಶ್ರೀಮತಿ ಕಮಲಮ್ಮ ಹಾಗೂ ಶ್ರೀ ವೆಂಕಟೇಶ ಅಯ್ಯರ್ ಅವರ ಪುತ್ರಿ ಎ.ವಿ.ಜಯಶ್ರೀ ರವರನ್ನು ವಿವಾಹವಾದರು.

1984ರಲ್ಲಿ ತಂದೆ ಶಾಮಣ್ಣ ದೀಕ್ಷಿತರ ನಿಧನದ ನಂತರ ಕಿತ್ತಿಗಾನಹಳ್ಳಿಯ ಶ್ರೀ ನಾಗೇಶ್ವರ ಕ್ಷೇತ್ರ, ಶ್ರೀ ಶ್ರೀನಿವಾಸ ದೇವಾಲಯ, ಬಿದರಗುಪ್ಪೆಯ ಶ್ರೀ ಸೋಮೇಶ್ವರ, ಶ್ರೀ ನಂಜುಂಡೇಶ್ವರ ದೇವಾಲಯಗಳ ಹಾಗೂ ಅತ್ತಿಬೆಲೆಯ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿ ದೇವಾಲಯಗಳ ನಿತ್ಯಪೂಜಾ, ರಥೋತ್ಸವಾದಿ ಕಾರ್ಯಕ್ರಮಗಳನ್ನು ಜವಾಬ್ದಾರಿಯಿಂದ ನಡೆಸಿಕೊಂಡು ಬರುವಲ್ಲಿ ಯಶಸ್ವಿಯಾದರು.

ತಮ್ಮ ಶೈವಾಗಮದ ಪಾಂಡಿತ್ಯದಿಂದ ದಕ್ಷಿಣದ ಎಲ್ಲ ರಾಜ್ಯಗಳು, ದೇಶದ ಇತರೇ ರಾಜ್ಯ ಹಾಗೂ ಅನೇಕ ವಿದೇಶಗಳಲ್ಲಿ ದೇವತಾ ಪ್ರತಿಷ್ಠಾಪನೆ, ಯಜ್ಞ-ಯಾಗಾದಿಗಳನ್ನು ನೆರವೇರಿಸಿದ ಕೀರ್ತಿ ಇವರದಾಗಿತ್ತು.

ಪುಟ್ಟಪರ್ತಿಯ ಶ್ರೀ ಸಾಯಿಬಾಬಾ ಅವರ ನಿಕಟ ಸಂಪರ್ಕ ಹೊಂದಿದ್ದ ಇವರು, ಅವರ ಮೆಚ್ಚುಗೆಗೆ ಪಾತ್ರರಾಗಿದ್ದರು. 'ಬಾಬಾ'ರವರಿಗೆ ಆಧ್ಯಾತ್ಮಿಕ ಸಲಹೆಗಾರರಾಗಿದ್ದ ಹಾಗೂ ದೇಶ-ವಿದೇಶಗಳ ಹನ್ನೊಂದು 'ಅತಿರುದ್ರ ಮಹಾಯಾಗಗಳ' ನಿರ್ವಹಣೆಯ ಕೀರ್ತಿ ಇವರದಾಗಿತ್ತು.

ಆದಿಚುಂಚನಗಿರಿಯ ಶ್ರೀ ಕಾಲಭೈರವ, ತಮಿಳುನಾಡಿನ ವೆಲ್ಲೂರಿನ ಗೋಲ್ಡನ್ ಟೆಂಪಲ್‌ನ ಶ್ರೀ ಮಹಾಲಕ್ಷ್ಮೀ ದೇವಾಲಯ ಮುಂತಾದ ಅನೇಕ ಪ್ರಮುಖ ದೇವಾಲಯಗಳ ಪ್ರತಿಷ್ಠಾಪನೆಗಳನ್ನು ನಿರ್ವಹಿಸಿರುತ್ತಾರೆ.

ಶ್ರೀಯುತರು ಆಗಮತ್ರಯ ಮಹಾಮಂಡಲಿಯ ಉಪಾಧ್ಯಕ್ಷ ಮತ್ತು ಅನೇಕ ಸಂಘ ಸಂಸ್ಥೆಗಳಲ್ಲಿ ಜವಾಬ್ದಾರಿಯುತ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದರು.


ಶ್ರೀಯುತರು ಆಗಮ ಚತುರ, ಆಗಮ ಪ್ರವೀಣ, ಆಗಮ ಅಲಂಕಾರ ಭೂಷಿತ ಮುಂತಾದ ಅನೇಕ ಬಿರುದುಗಳನ್ನು ಗಳಿಸಿದರು.

ಶ್ರೀಯುತರು ಕು॥ ಸಂಧ್ಯಾ ಎಂಬ ಪುತ್ರಿ, ಅಶ್ವತ್ಥ್ ಎಂಬ ಪುತ್ರನನ್ನು ಪಡೆದಿದ್ದು, ಕೆಲವು ತಿಂಗಳ ಹಿಂದೆಯಷ್ಟೇ ಕು॥ ಸಂಧ್ಯಾ ಇಹಲೋಕವನ್ನು ತ್ಯಜಿಸಿದ್ದರು.

ದಿನಾಂಕ: 19.02.2019ರಂದು ನಮ್ಮೆಲ್ಲರಿಗೂ ಆತ್ಮೀಯರಾಗಿದ್ದ ಶ್ರೀ ನಂಜುಂಡ ದೀಕ್ಷಿತರು ಕುಟುಂಬ, ಬಂಧುಗಳು, ಹಿತೈಷಿಗಳು, ಅಪಾರ ಶಿಷ್ಯ ವೃಂದವನ್ನು ಅಗಲಿರುತ್ತಾರೆ.

ಬೃಹಚ್ಚರಣ ಸಮುದಾಯದ ಪರವಾಗಿ ದುಃಖತಪ್ತ ಕುಟುಂಬ, ಬಂಧು ಬಳಗ, ಹಾಗೂ ಮೃತರ ಆತ್ಮಕ್ಕೆ ನಮ್ಮೆಲ್ಲರ ಅನಂತಾನಂತ ನಮನಗಳು.

◆ ವಿ.ಎಸ್.ಮಣಿ
9845055582





# ರಥಸಪ್ತಮಿ ಸಮನ್ವಯ ಚಿಂತನೆ

ರಥಸಪ್ತಮಿಯನ್ನು ಪ್ರತೀ ವರ್ಷ ಮಾಘ ಮಾಸ ಶುಕ್ಲಪಕ್ಷದ ಸಪ್ತಮೀ ದಿನದಂದು ಆಚರಿಸುವುದು ವಾಡಿಕೆಯಲ್ಲಿದೆ. ಪ್ರತ್ಯಕ್ಷ ದೈವವಾದ ಸೂರ್ಯದೇವನು ಅಂದಿನ ದಿನ ರಥವನ್ನೇರಿ ಸಿಂಹ ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುತ್ತಾನೆ ಎಂದು ನಮ್ಮ ಪುರಾಣಗಳಲ್ಲಿ ಉಲ್ಲೇಖವಿದೆ. ಅಂದಿನಿಂದ ಸೂರ್ಯನ ಪ್ರಖರತೆ ಹೆಚ್ಚಾಗಿ ಬೇಸಿಗೆ ಕಾಲ ಪ್ರಾರಂಭವಾಗುತ್ತದೆ. ಮಾನವ ಶರೀರದಲ್ಲಿ ಜ್ಞಾನಭಾಸ್ಕರನಾಗಿರುವ ಸೂರ್ಯನ ರಥಕ್ಕೆ ಏಕ ಚಕ್ರವಿದ್ದು ಅದರ ಸಾರಥಿ ಅರುಣ. ಸೂರ್ಯೋದಯಕ್ಕೆ ಮುನ್ನ ಬಾನಿನಲ್ಲಿ ಮೂಡುವ ಹೊಂಬಣ್ಣವೇ ಅರುಣ. ಹೀಗೆಂದರೆ ಜ್ಞಾನಾರ್ಜನೆಯ ಸಾಧನಾ ಮಾರ್ಗದ ಪ್ರಾರಂಭದಲ್ಲಿ ಕರ್ಮೋಪಾಸನೆಯನ್ನು ಸೂಚಿಸುತ್ತದೆ. ಈ ರಥಕ್ಕಿರುವ ಏಳು ಕುದುರೆಗಳೇ ಪ್ರಪಂಚದ ಏಳು ಬಣ್ಣಗಳ ಪ್ರತೀಕ. ಇದನ್ನು ಮಾನವ ದೇಹಕ್ಕೆ ಸಮನ್ವಯ ಗೊಳಿಸಿದಾಗ ಸೂರ್ಯನ ರಥವೇ ಈ ಮಾನವ ದೇಹ, ಏಳು ಎನ್ನುವುದು ಪಂಚ ಜ್ಞಾನೇಂದ್ರಿಯಗಳು, ಅಂತಃಕರಣ ವೃತ್ತಿಗಳಾದ ಮನಸ್ಸು ಮತ್ತು ಬುದ್ಧಿ ಎನ್ನಬಹುದು. ಪಂಚಜ್ಞಾನೇಂದ್ರಿಯಗಳಿಂದ ಸ್ಥೂಲ ಪ್ರಪಂಚದ ಅರಿವು ಉಂಟಾದರೂ ಅದು ಮನಸ್ಸಿನಲ್ಲಿ ನಿಶ್ಚಯವಾಗಿ, ಬುದ್ಧಿಯಲ್ಲಿ ತರ್ಕರಾಹಿತ್ಯವಾದಾಗ ಬುದ್ಧಿಯು ಸೂಕ್ಷ್ಮವಾಗುತ್ತದೆ. ಇದರಿಂದ ಪ್ರಪಂಚದ ಅಶಾಶ್ವತತೆಯ ತಿಳಿವಳಿಕೆಯಾಗಿ ಶಾಶ್ವತವಾದ ಆನಂದ ಸ್ವರೂಪವೇ ಆತ್ಮ ಮತ್ತು ಪರಮಾತ್ಮ ಎಂಬ ಆತ್ಮೈಕ್ಯ ಭಾವವನ್ನು ಹೊಂದಬಹುದು.


ರಥಸಪ್ತಮಿಯ ದಿನದಂದು ಕೃಷ್ಣಯಜುರ್ವೇದದ ತೈತ್ತರೀಯ ಆರಣ್ಯಕದಲ್ಲಿ ಪ್ರಸ್ತಾಪಿಸಿರುವ ಅರುಣ ಪ್ರಶ್ನ ರೀತ್ಯ 108 ಸೂರ್ಯ ನಮಸ್ಕಾರಗಳನ್ನು ಮಾಡುವುದು ಪದ್ಧತಿಯಲ್ಲಿದೆ. ಅದಲ್ಲದೆ ಅಂದು ಭಕ್ತರು ಒಂದೇ ದಿನದಲ್ಲಿ ಮೂರು ಶ್ರೀರಂಗನಾಥರ ದರ್ಶನ ಮಾಡುವುದು ಸೌಭಾಗ್ಯವೆಂದು ಪ್ರತೀತಿಯಲ್ಲಿದೆ. ಮೊದಲನೆಯದು ಶ್ರೀರಂಗಪಟ್ಟಣದ ಶ್ರೀರಂಗನಾಥ (ಆದಿರಂಗ), ಎರಡನೆಯದು ಶಿವನಸಮುದ್ರದ ಶ್ರೀರಂಗನಾಥ (ಮಧ್ಯರಂಗ) ಮತ್ತು ಕೊನೆಯದು ಶ್ರೀರಂಗಂನ ಶ್ರೀರಂಗನಾಥ (ಅಂತ್ಯರಂಗ). ಈ ದರ್ಶನದಿಂದ 84 ಲಕ್ಷ ಜೀವರಾಶಿಗಳಲ್ಲಿ ಶ್ರೇಷ್ಠನಾದ ಮಾನವ ಜೀವಿಗೆ ಮಾತ್ರ ಜನನ, ಜೀವನ, ಮರಣಗಳ ಚಕ್ರದಲ್ಲಿ ತಾನು ಸುತುತ್ತಿದ್ದೇನೆ ಎಂದು ತಿಳಿಯಲು ಅವಕಾಶವಿರುವುದು. ಏಕೆಂದರೆ ಮಾನವನಿಗೆ ಮಾತ್ರ ವಾಕ್ ಮತ್ತು ವಿವೇಕ್ ಎಂಬ ವಿಶೇಷವಾದ ಸೌಲಭ್ಯವಿರುವುದು.

ಯಾವುದೇ ವಸ್ತು, ವ್ಯಕ್ತಿ ಮತ್ತು ವಿಚಾರಗಳು ಪ್ರಾರಂಭವಾಗುತ್ತವೆ ಮತ್ತು ಕೊನೆಗೊಳ್ಳುತ್ತವೆ ಎಂದು ಮನುಷ್ಯನಿಗೆ ನಿಶ್ಚಯವಾಗಿ ತಿಳಿದಿರುತ್ತದೆ. ಮಧ್ಯದ ಬದುಕನ್ನ ಸುಗಮವಾಗಿ ಸಾಗಿಸಲು ಜ್ಞಾನ ಅತ್ಯವಶ್ಯಕ. ಆದರೆ ಈ ಬದುಕಿನಲ್ಲಿ ಪ್ರತೀ ಮನುಷ್ಯನಿಗೆ ಸುಖ ಮತ್ತು ದುಃಖಗಳು ಸಹಜ ವಾಗಿ ಬಂದು, ಇದ್ದು, ಹೋಗುವಂತಹುದು. ಆದರೆ ಇದು ಸತ್ಯವಲ್ಲ. ಸತ್ಯ ಎಂದರೆ ಸದಾ ಬದಲಾಗದೆ ಒಂದೇ ರೀತಿಯಲ್ಲಿ ಇರುವುದು. ನಮಗೆ ಆದ್ಯಂತಿಕ ದುಃಖ ನಿವೃತ್ತಿ ಮತ್ತು ಪರಮಾನಂದ ಪ್ರಾಪ್ತಿಯಾಗಬೇಕಾದರೆ ಈ ಮೇಲಿನ ಕ್ಷೇತ್ರಗಳಲ್ಲಿ ಯೋಗ ನಿದ್ರೆಯಲ್ಲಿರುವ ಶ್ರೀರಂಗನಾಥನಂತೆ ಪ್ರಪಂಚದ ಎಲ್ಲಾ ಆಗು–ಹೋಗುಗಳನ್ನು ಸಾಕ್ಷಿಯಾಗಿ, ಯಥಾರ್ಥ ಭಾವದಿಂದ ನೋಡುವುದನ್ನು ಅಭ್ಯಾಸ ಮಾಡಿ ಕೊಳ್ಳಬೇಕು. ಶೃತಿ, ಸ್ಮೃತಿ ಮತ್ತು ಪುರಾಣಗಳ ಅಧ್ಯಯನ, ತೀರ್ಥಕ್ಷೇತ್ರ ದರ್ಶನ, ಪ್ರವಚನಗಳ ಶ್ರವಣ, ಮನನ ಮತ್ತು ನಿಧಿ ಧ್ಯಾಸನಗಳನ್ನು ಸಾಧನಾ ಮಾರ್ಗದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಪ್ರಾರಬ್ಧಕರ್ಮವಶಾತ್ ಅನುಭವಿಸಲೇಬೇಕಾದ ಕರ್ಮಫಲಗಳು ಬಾಕಿ ಇದ್ದರೂ ಈ ಮೇಲಿನ ತಿಳಿವಳಿಕೆಯಿಂದ ಯಾವುದೇ ವೈಪರೀತ್ಯಕ್ಕೊಳಗಾಗದೆ ಸಮತ್ವ ಮತ್ತು ಕೌಶಲ್ಯಗಳಿಂದ ಸಂತೃಪ್ತ ಜೀವನ ಸಾಗಿಸಬಹುದು.

◆ **ಆರ್.ರಮೇಶ್**
**9886034048**



**3–ಡಿ ಚಿತ್ರ** **ಸೋನಿಯಾ ಶಿವರಾಂ**



## ಕೋಣೆಯಲ್ಲೆ ಇದೆ ಯಶಸ್ಸಿನ 7 ಸೂತ್ರಗಳು

"ಕೆಲವರು" ನನ್ನ ಹಣೇಬರಹ ಸರಿ ಇಲ್ಲ"... ನಮ್ಮ ಮನೆಯವರು, ಸ್ನೇಹಿತರು ನನ್ನ ಅರ್ಥಮಾಡಿಕೊಳ್ಳುತ್ತಿಲ್ಲಾ..? ಯಾರೂ ನನಗೆ ಸಪೋರ್ಟ್ ಮಾಡುತ್ತಿಲ್ಲಾ... ಅಂತೆಲ್ಲಾ ನಾನಾ ಕಾರಣ ಹೇಳಿ ಮಾಡಬೇಕಾದ ಕೆಲಸ ಮಾಡದೆ, ಸಾಧಿಸುವ ಗುರಿಯನ್ನು ಮರೆತು ಮತ್ತೊಂದನ್ನು ಅವಲಂಬಿಸಿ ಕೂರುತ್ತಾರೆ.

ಆದರೆ ಇದೆಲ್ಲಾ ನಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವ ನೆಪವಷ್ಟೇ. ಮನಸ್ಸು ಮಾಡಿದರೆ ಕಲಿಯಲು ತುಂಬಾ ಅವಕಾಶಗಳಿವೆ. ಬೇರೆಯವರ ಮೇಲೆ ಅವಲಂಬಿತರಾಗದೆ, ನಮ್ಮನ್ನು ನಾವೇ ಪ್ರೋತ್ಸಾಹಿಸಿ ಕೊಳ್ಳಬೇಕು. ನಮ್ಮೊಳಗಿರುವ ಶಕ್ತಿಯನ್ನು ಬಡಿದೆಬ್ಬಿಸಬೇಕು. ಅಂದಾಗಲೇ ನಾವು ಈ ಜೀವನದಲ್ಲಿ ಏನಾದರೂ ಸಾಧಿಸಿ ನಮ್ಮ ಗುರುತನ್ನು ಉಳಿಸಿ ಹೋಗಲು ಸಾಧ್ಯ.

ನಮ್ಮ ರೂಮಿನಲ್ಲಿರುವ ಈ ಏಳು (7) ವಸ್ತುಗಳು ನಮ್ಮ ಜೀವನ ಮಾರ್ಗದರ್ಶಿ ಎಂದರೆ ತಪ್ಪಾಗಲಿಕ್ಕಿಲ್ಲ. ಅವುಗಳೆಂದರೆ;

1. **ಮೇಲ್ಛಾವಣಿ** : ಮಾಜಿರಾಷ್ಟ್ರಪತಿ ಎ.ಜಿ.ಜೆ. ಅಬ್ದುಲ್‌ಕಲಾಂ ಅವರು ಹೇಳಿದಂತೆ, ಸಣ್ಣ ಕನಸು ಕಾಣುವುದು ಅಪರಾಧ. ಯಾವಾಗಲೂ ದೊಡ್ಡ ಕನಸನ್ನೇ ಕಾಣಬೇಕು. ಅದನ್ನು ಮೇಲ್ಛಾವಣಿಯ ಎತ್ತರ ನಮಗೆ ಕಲಿಸುತ್ತದೆ. ಮನೆಗೆ ನೀಡುವ ಆಸರೆಯಂತೆ ನಮ್ಮ ಕನಸನ್ನು ನಾವು ಎತ್ತರಿಸಬೇಕು. ಆ ಎತ್ತರಕ್ಕೆ ಬೆಳೆದು ಮನೆಗೆ ಆಸರೆಯಾಗಬೇಕು.

2. **ಫ್ಯಾನ್** : ಯಾವಾಗಲೂ 'ಕೂಲ್ ಆಗಿರು' ಎಂದು ಇದು ನಮಗೆ ಹೇಳುತ್ತದೆ. ಯಾರು ಎಷ್ಟೇ ನಮ್ಮ ಮೇಲೆ ಒತ್ತಡ ಹೇರಿದರೂ. ಶಾಂತಿ ಸಮಾಧಾನದಿಂದ ಇದ್ದು ಬೇರೆಯವರಿಗೆ ತಂಪನ್ನೇ ನೀಡಬೇಕು.

3. **ಗಡಿಯಾರ** : ಗಡಿಯಾರ ಸಮಯದ ಮಹತ್ವವನ್ನು ತಿಳಿಸುತ್ತದೆ. ಸಮಯದ ಪರಿವೆಯೇ ಇಲ್ಲದವನು, ಸಮಯವನ್ನು ದುರುಪಯೋಗ ಮಾಡಿಕೊಳ್ಳುವನು. ಯಾವತ್ತಿಗೂ ಏನೂ ಸಾಧಿಸಲಾರ.

4. **ಕನ್ನಡಿ** : ಇದು ನಮ್ಮ ಪ್ರತಿಬಿಂಬ ತೋರಿಸುತ್ತದೆ. ಪ್ರತಿದಿನ ನಾವು ಕನ್ನಡಿಯ ಮುಂದೆ ನಿಂತು ನಮ್ಮಷ್ಟಕ್ಕೆ ನಾವು ಮಾತನಾಡಿಕೊಳ್ಳಬೇಕು. ಇಲ್ಲದಿದ್ದರೆ ಒಬ್ಬ ಮಹತ್ತರ ವ್ಯಕ್ತಿಯನ್ನು ಕಳೆದುಕೊಂಡ ಹಾಗೆ ಎಂದಿದ್ದಾರೆ, ಮಹಾನುಭಾವರು.

5. **ಕಿಟಕಿ** : ಕಿಟಕಿ ಜಗತ್ತನ್ನು ನೋಡು ಎಂದು ಹೇಳುತ್ತದೆ. ನಿನಗಿಂತ ಕಷ್ಟದಲ್ಲಿರುವ ಜನರು ಸಾಧನೆ ಮಾಡಿದವರು ಇದ್ದಾರೆ. ಎಲ್ಲಾ ಇದ್ದು ನಿನಗೇಕೆ ಸಾಧ್ಯವಿಲ್ಲ....? ಎಂದು ಪ್ರಶ್ನಿಸುವ ಕಿಟಕಿ ಸ್ವಲ್ಪ ಆಚೆ ಇಣುಕಿ ನೋಡು' ಎಂದು ಹೇಳುತ್ತದೆ.

6. **ಕ್ಯಾಲೆಂಡರ್** : ಪ್ರತಿದಿನ ಅಪ್‌ಡೇಟ್ ಆಗುತ್ತಿರುವ ನನ್ನನ್ನಾದರೂ ನೋಡಿ ಹೊಸದನ್ನು ಕಲಿ ಎಂದು ಹೇಳುತ್ತದೆ. ಜೀವನದಲ್ಲಿ ಕಲಿಯಬೇಕಾಗಿರುವುದು ತುಂಬಾ ಇದೆ.

7. **ಬಾಗಿಲು** : ನಾವು ಹೊರಗಡೆ ಹೋಗಬೇಕೆಂದರೆ ಬಾಗಿಲು ಹೇಗೆ ತೆಗೆಯುತ್ತೇವೋ ಹಾಗೆ ನಮ್ಮ ಕಷ್ಟಗಳನ್ನು ನಾವೇ ಮೆಟ್ಟಿ ನಿಲ್ಲಬೇಕು. ಎಲ್ಲ ಕಷ್ಟ ಮೆಟ್ಟಿನಿಂತು ಸಾಧನೆ ಮಾಡಿದಾಗ ನಮ್ಮ ಅದೃಷ್ಟದ ಬಾಗಿಲು ತಂತಾನೆ ತೆಗೆಯುತ್ತದೆ ಎಂದು ಬಾಗಿಲು ಹೇಳುತ್ತದೆ.

ನಮ್ಮ ಜೀವನ ಹೇಗಿದೆ ಎಂದರೆ ನಮ್ಮ ಸಂತೋಷಕ್ಕಾಗಿ ಇನ್ನೊಬ್ಬರನ್ನು ಅವಲಂಬಿಸಬೇಕಾಗಿದೆ. ಜತೆಗೆ ಬೇರೆಯವರಿಗೆ ಪ್ರದರ್ಶಿಸುವುದಕ್ಕಾಗಿ ನಮ್ಮ ಜೀವನ ಪದ್ಧತಿಯನ್ನೇ ಬದಲಿಸಿಕೊಳ್ಳುತ್ತಿದ್ದೇವೆ. ಬೇರೆಯವರನ್ನು ಅನುಸರಿಸುವುದಕ್ಕೂ ಮಿತಿ ಇರಬೇಕು. ನಮ್ಮ ಸುತ್ತಮುತ್ತಲಿನ ಎಲ್ಲರನ್ನೂ ಪ್ರೀತಿಯಿಂದ ಕಾಣೋಣ. ಜೀವನದ ಪ್ರತಿಯೊಂದು ಹಂತದಲ್ಲಿ ಕಲಿಕೆಯನ್ನು ಮುಂದುವರಿಸೋಣ. ಸಾಧಕರ ಸಾಲಿನಲ್ಲಿ ಗುರುತಿಸಿಕೊಳ್ಳುವ ಕೆಲಸ ಮಾಡೋಣ. ಸಮಾಜಕ್ಕೆ ಉತ್ತಮ ಉದಾಹರಣೆ ಆಗೋಣ.

**ಎಸ್. ಶ್ರೀನಿವಾಸಯ್ಯ**
ಕಿತ್ತಿಗಾನಹಳ್ಳಿ

ಮಕ್ಕಳ ಕತೆ

## ನಾಯಿಬಾಲ

ನಾಯಿಬಾಲನ ನೆಟ್ಟಗೆ ಮಾಡಕ್ಕೆ ಹೇಗೆ ಬರದಿಲ್ವೊ ಹಾಗೆ ಈ ಸಂಸಾರದ ತಾಪತ್ರಯಗಳನ್ನು ಪೂರಾ ನೆಟ್ಟಗೆ ಮಾಡಕ್ಕೆ ಯಾರ ಕೈಲೂ ಆಗಲ್ಲ. ಸುಖ ಬಂದಿರುವುದೇ ಅದರ ಹಿಂದೆ ದುಃಖ ಅನುಭವಿಸುವುದಕ್ಕೆ. ಒಂದು ತಾಪತ್ರಯ ತೀರಿತು ಅಂದರೆ ಅದರ ಅಪ್ಪನಂತಾದ್ದು ಕಾದುಕೊಂಡು ಕೂತಿರುತ್ತದೆ.

ಹೊರಗಡೆ ಏನೇನು ಕಟ್ಕಂಡಿರ್ತೀರ್ಯೋ ಆ ಕರ್ತವ್ಯ ಮಾಡಿಕೊಂಡು ಅಂತರಂಗದಲ್ಲಿ ಭಗವಂತನ ಸ್ಮರಣೆ ಮಾಡ್ಕೊಂಡು, ಈ ಪ್ರಪಂಚದಲ್ಲಿ ಇದ್ದೂ ಇಲ್ಲದಂತೆ ಜೀವನ ಮಾಡಿಕೊಂಡು ಹೋಗ್ತಿರಬೇಕು. ಶರೀರ ಕಳಚಿದ ಮರುಕ್ಷಣದಿಂದ ಯಾರಿಗೆ ಯಾರೂ ಇಲ್ಲ. ಆವಾಗ ದೇಹ ಇರಲ್ಲ ಅಷ್ಟೇ. ಎಲ್ಲಾ ಮುಗಿದ ಹಾಗೆ ಅಲ್ಲ. ಜೀವಾತ್ಮ ತಾನು ಮಾಡಿದ ಪುಣ್ಯಾರ್ಜನೆ. ಗುರುಸೇವೆ, ಸ್ಮರಣೆ, ಭಜನೆ, ಧ್ಯಾನ, ಪರೋಪಕಾರ, ದೈವಕಾರ್ಯ, ಸಚ್ಚಿಂತನೆ ಇಂತಹವೇ ಪುಣ್ಯದ ಗಂಟು ಊರ್ಧ್ವಕ್ಕೆ ಕರೆದುಕೊಂಡುಹೋಗುತ್ತೆ. ಮಾಡಿದಕ್ಕೆ ಅನುಸಾರವಾಗಿ ಜನ್ಮ ಸಿಗುತ್ತದೆ. ಯಾರು ದೈವವನ್ನು ನಂಬಿರುತ್ತಾರೋ, ಗುರುವನ್ನು ಆಶ್ರಯಿಸಿರ್ತಾರೋ ಅವರಿಗೆ ಎಂದಿಗೂ ಅಧೋಗತಿ ಆಗುವುದಿಲ್ಲ.

**ಛಾಯಾ ಭಗವಾನ್**

# ವಾರಾನ್ನ

ಗ್ರಾಮಗಳಿಂದ ವಿದ್ಯಾರ್ಥಿಗಳು ಪಟ್ಟಣಗಳಿಗೆ ಓದಲು ಬರುತ್ತಾರೆ. ಹಾಗೆ ಬಂದವರು ಎಲ್ಲಿಯೋ ಒಂದು ಚಾವಡಿಯಲ್ಲಿ ಮಲಗುತ್ತಾರೆ. ಅವರ ಊಟದ ಸಮಸ್ಯೆಯನ್ನು ಬಗೆಹರಿಸಲು ಹಿಂದೆ ವಾರಾನ್ನದ ವ್ಯವಸ್ಥೆಯಿತ್ತು.

ವಾರಾನ್ನ ಎಂದರೆ ಸುಮಾರು ಏಳು ಮನೆಗಳನ್ನು ಪತ್ತೆ ಹಚ್ಚಿ ಒಂದೊಂದು ಮನೆಯಲ್ಲಿ ಒಂದೊಂದು ದಿನ ಊಟ ಮಾಡಲಿಕ್ಕೆ ಮಾಡಿಕೊಳ್ಳುವ ಊಟದ ವ್ಯವಸ್ಥೆ. ಈ ವ್ಯವಸ್ಥೆ ಪುಕ್ಕಟೆಯಾದುದು. ಬಡವಿದ್ಯಾರ್ಥಿಗಳಿಗೆ ಮಾಡುವ ನೆರವು. ಇಚ್ಛೆ ಇದ್ದವರು ನೀಡುವ ನೆರವು. ಬಡವರು ವಿದ್ಯಾವಂತ ರಾಗಲು ಇದ್ದ ಏಕೈಕ ಮಾರ್ಗ. ಸೋಮವಾರದಿಂದ ಭಾನುವಾರದವರೆಗೂ ಒಂದೊಂದು ಮನೆಯಲ್ಲಿ ಊಟದ ವ್ಯವಸ್ಥೆ ಇರುತ್ತಿತ್ತು. ವಿದ್ಯಾರ್ಥಿಗಳು ಬೆಳಿಗ್ಗೆಯೆ ಅವರ ಮನೆ ಗಳಿಗೆ ಹೋಗಿ ಮನೆಗೆಲಸಗಳನ್ನು ಮಾಡಿಕೊಡುತ್ತಿದ್ದರು. ಪ್ರತಿಫಲವಾಗಿ ಊಟ ಮಾಡುತ್ತಿದ್ದರು. ಮನೆಯ ಇತರೇ ಹುಡುಗರ ಜೊತೆಯಲ್ಲಿ ಬೆರೆತು ಓದು ಮುಂದುವರಿಸುತ್ತಿದ್ದರು. ರಜದಲ್ಲಿ ಊರಿಗೆ ಹೋದಾಗ ಹಳ್ಳಿಯಿಂದ ದವಸ ಧಾನ್ಯಗಳನ್ನು ತಂದು ಮನೆಗಳಿಗೆ ನೀಡುತ್ತಿದ್ದರು. ಜೊತೆಗೆ ಅವರ ವ್ಯಾಸಂಗ ಮುಂದುವರಿಸುತ್ತಿದ್ದರು. ಇದೊಂದು ಕೃತಜ್ಞತಾಪೂರ್ವಕ ಸಾಮಾಜಿಕ ಕ್ರಿಯೆ.

ಹಲವು ವರ್ಷಗಳ ಓದು ಮುಗಿದ ನಂತರ ಆ ಹುಡುಗ ಹೆಚ್ಚಿನ ವ್ಯಾಸಂಗ ಪಡೆದು ಕೆಲಸಕ್ಕೆ ಸೇರಿಕೊಳ್ಳುತ್ತಿದ್ದ. ಈ ಮನೆಗೊಂದು ಕೃತಜ್ಞತೆಯ ಸೇತುವೆಯಾಗುತ್ತಿದ್ದ. ವಾರಾನ್ನದ ಮನೆಯ ಬಾಲಕರ ಸ್ನೇಹಿತನಾಗುತ್ತಿದ್ದ. ಕೆಲವೊಮ್ಮೆ ಆ ಮನೆಯ ಹೆಣ್ಣು ಮಗಳನ್ನು ಮದುವೆಯಾಗಿ ಅಳಿಯನೂ ಆಗಿಬಿಡುತ್ತಿದ್ದ. ಆದರೆ ಅದು ನಿರ್ಬಂಧವಾಗುತ್ತಿರಲಿಲ್ಲ. ಕೃತಜ್ಞತೆ ಭಾವವಾಗುತ್ತಿತ್ತು. ವಾರಾನ್ನದ ಮನೆಯ ಚಿಕ್ಕ ಮಕ್ಕಳಿಗೆ ಪಾಠ ಹೇಳುವುದು ಆಗುತ್ತಿತ್ತು. ಮಕ್ಕಳ ಪುರೋಭಿವೃದ್ಧಿಗೆ ಕಾರಣವಾದ ವಾರಾನ್ನದ ಹುಡುಗ ಆ ಮನೆಗೊಂದು ಅಪೂರ್ವ ಕೊಡುಗೆ ನೀಡುತ್ತಿದ್ದ. ಹೀಗಾಗಿ ಅವರ ಬಾಂಧವ್ಯ ಸ್ಥಿರವಾಗುತ್ತಿತ್ತು.

ಕೆಲವು ವೇಳೆ ಇವನು ವಾರಾನ್ನದ ಹುಡುಗನೆಂದು ಅನಾದಾರಕ್ಕೂ ಒಳಗಾಗುತ್ತಿದ್ದ. ಇದರಿಂದ ಅವನಿಗೆ ಬೇಜಾರು ಎನಿಸಿದರೂ ಅನಿವಾರ್ಯದಿಂದ ಸಹಿಸಿಕೊಳ್ಳ ಬೇಕಾಗುತ್ತಿತ್ತು. ಆದರೂ ಆ ಮನೆಯ ಸಂಬಂಧ ಕಡಿಯುವಷ್ಟು ಕೆಟ್ಟದ್ದಾಗದು. ಏಕೆಂದರೆ ಅನ್ನ ತಿಂದ ಋಣ ಆ ಬಡವಿದ್ಯಾರ್ಥಿಯ ಮೇಲಿರುತ್ತಿತ್ತು. ವಾರಾನ್ನದ ಪ್ರಕ್ರಿಯೆ ಇಂದು ಕಡಿಮೆಯಾದರೂ ಇಂದಿಗೂ ಅಲ್ಲಲ್ಲಿ ನಾವು ಕಾಣುತ್ತೇವೆ. ವಿದ್ಯಾರ್ಜನೆಗೋಸುಗ ಇರುವ ಒಂದು ವ್ಯವಸ್ಥೆ. ಇದರ ಉಪಯೋಗ ಈಗಲೂ ಆಗುತ್ತಲಿದೆ. ಇದೊಂದು ಸಮಾಜದ ಸಜ್ಜನರಿಂದ ನೀಡಲ್ಪಟ್ಟಿರುವ ಮಹತ್ತರ ಕೊಡುಗೆ.

ವಾರಾನ್ನದ ಈ ಪರಿಶ್ರಮ ಬೇರೊಂದು ರೀತಿಯಲ್ಲಿ ಮಾರ್ಪಾಡಾಗಿದೆ. ಮೊನ್ನೆ ನನ್ನ ಭಾವ–ಮೈದುನ ನಮ್ಮ ಮನೆಗೆ ಬಂದಿದ್ದಾಗ 'ನನ್ನ ಹೆಂಡತಿ, ಮಗಳ ಮನೆಗೆ ಬಾಣಂತನಕ್ಕೆ ಹೋಗಿದ್ದಾಳೆ. ನಾನು ಮನೆಯಲ್ಲಿ ಒಬ್ಬಂಟಿ. ಅಡುಗೆ ಮಾಡಲು ಬರುವುದಿಲ್ಲ. ಹಾಗಾಗಿ ನೆಂಟರ ಮತ್ತು ಇಷ್ಟರ ಮನೆಯಲ್ಲಿ ಒಂದೊಂದು ಮನೆಯಲ್ಲಿ ಊಟ ಮಾಡಲು ಸಹಾಯ ಮಾಡಿ' ಎಂದರು. ನಾನು ಧಾರಾಳವಾಗಿ ಸರಿ ಎಂದೆನು. ಹೀಗೆ ನಾನು ಒಂದು ದಿನ ಅವರಿಗೆ ಅತಿಥಿಯಾಗಲು ತಿಳಿಸಿದೆ. ಇದು ಒಂದು ರೀತಿಯ ವಾರಾನ್ನ ಕ್ರಮದ ಮಾರ್ಪಾಡು ಯೋಜನೆ.

ತಮಾಷೆಯೆನಿಸಿದರೂ ಸಂತಸದಿಂದ ಮಾಡುವ ಅಗತ್ಯ ಪರಿಕ್ರಮ. ಅಪರಿಮಿತ ಬಾಂಧವ್ಯವಿದೆ. ಆನಂದವಿದೆ ಸಂತಸವಿದೆ.

ಹೀಗಾಗಿ ವಾರಾನ್ನ ಪರಿಕ್ರಮ ಅವಶ್ಯವಾಗಿ ಪರಸ್ಪರ ಸಹಾನುಭೂತಿಯಿಂದ ಮುಂದುವರಿಯಬೇಕು. ಅದು ವಿದ್ಯಾಭ್ಯಾಸಕ್ಕೆ ಮಹತ್ತರ ಕೊಡುಗೆ.



◆ **ಜಿ.ಎಸ್. ಸತ್ಯಮೂರ್ತಿ**
**9844469581**

## ಸಾಮೂಹಿಕ ಬ್ರಹ್ಮೋಪದೇಶ

ಕಿತ್ತಿಗಾನಹಳ್ಳಿ 'ಸಹೃದಯ ವಿಪ್ರವೃಂದ' ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿಯಾದ ವೈಶಾಖ ಶುದ್ಧ ಪಂಚಮಿ ದಿನಾಂಕ 09-05-2019 ಗುರುವಾರದಂದು ಶ್ರೀ ಲಕ್ಷ್ಮಿನಾರಾಯಣ ಸಮುದಾಯ ಭವನ, ನಾಗೇಶ್ವರ ಕ್ಷೇತ್ರದಲ್ಲಿ ಸಾಮೂಹಿಕ ಬ್ರಹ್ಮೋಪದೇಶವನ್ನು ಕೈಗೊಳ್ಳಲು ನಿಶ್ಚಯಿಸಿರುತ್ತಾರೆ. ತ್ರಿಮತಸ್ಥ ಬ್ರಾಹ್ಮಣರು ಈ ಸದವಕಾಶವನ್ನು ಉಪಯೋಗಿಸಿಕೊಳ್ಳಲು ಕೋರಲಾಗಿದೆ.

**ಹೆಚ್ಚಿನ ಮಾಹಿತಿಗಾಗಿ:** ಶ್ರೀಯುತರಾದ **ಎನ್.ಎಸ್. ನಾಗರಾಜ್**, ನೆರಳೂರು, 9880204064, **ಸೂರ್ಯನಾರಾಯಣ ದೀಕ್ಷಿತ್**, ಕಿತ್ತಿಗಾನಹಳ್ಳಿ 9448072863, **ಸತ್ಯನಾರಾಯಣ (ಸತೀಶ್)**, ಕಿತ್ತಿಗಾನಹಳ್ಳಿ, 9980945699

# ನೆನಪಿನಂಗಳದಲ್ಲಿ ಚಿತ್ರ 37–38



ಶ್ರೀಮತಿ ನಾರಾಯಣಮ್ಮನವರ ಕುಟುಂಬ–1972



ಶ್ರೀಮತಿ ನರಸು ಹಾಗೂ ರಾಮಚಂದ್ರ ವಿವಾಹದ ಸಂದರ್ಭ–1973



ಚಿತ್ರ ಕೃಪೆ : ಶ್ರೀಮತಿ ನರಸು

# ಭಗವಂತನ ಸಾಮೀಪ್ಯ

ಒಂದು ಖಾಲಿ ಪಾತ್ರೆ ಇದ್ದರೆ ನಮಗೆ ಬೇಕಾದನ್ನು ಅದರಲ್ಲಿ ತುಂಬಬಹುದು. ಆದರೆ ಏನು ತುಂಬುತ್ತೇವೆ? ಏನು ತುಂಬಬೇಕು? ಎಂಬುದು ಬಹಳ ಮುಖ್ಯ.

ಹೃದಯವೂ ಹೀಗೆಯೇ. ಒಳ್ಳೆಯ ಸಂಗತಿಗಳು ಎಷ್ಟಿದ್ದರೂ ಹೃದಯದಲ್ಲಿ ಅವಕ್ಕೆ ಜಾಗ ಇದ್ದೇ ಇರುತ್ತದೆ. ನಾವು ಭಗವಂತನಿಗೆ ಹತ್ತಿರವಾಗಬೇಕು. ಆತ ನಮ್ಮ ಹೃದಯವಾಸಿಯಾಗಬೇಕು ಎಂದರೆ ನಮ್ಮ ಹೃದಯ ಖಾಲಿ ಇರಬೇಕು.

ಕೃಷ್ಣನ ಕೈಯಲ್ಲಿ ಸದಾ ಒಂದು ಕೊಳಲು ಇರುವುದಲ್ಲವೇ? ಒಮ್ಮೆ ರಾಧೆ ಈ ಕೊಳಲು ಅದಾವ ಜನ್ಮದಲ್ಲಿ ಅದೆಷ್ಟು ಪುಣ್ಯ ಮಾಡಿತ್ತೋ ಯಾವಾಗಲೂ ಅವನ ಸಾಂಗತ್ಯದಲ್ಲಿ ಶೋಭಿಸುತ್ತದೆ. ಅಂತ ಅಚ್ಚರಿಗೊಂಡಳು. ಆಕೆಗೆ ಕೃಷ್ಣ ಬಳಿಯಲ್ಲಿದ್ದರೂ ಚಿಂತೆ, ಇಲ್ಲದಿದ್ದರೂ ಚಿಂತೆ, ಇದ್ದರೆ ಅದ್ಯಾವ ಮಾಯದಲ್ಲಿ ನನ್ನನ್ನು ಬಿಟ್ಟು ಹೋಗುವನೋ ಎಂಬ ಚಿಂತೆ, ಇಲ್ಲದಿದ್ದರೆ ಯಾವಾಗ ದರ್ಶನ ಕೊಡುವನೋ? ಎಂಬ ಚಿಂತೆ, ಹೀಗೆ ಕೃಷ್ಣ ಸನಿಹದಲ್ಲಿದ್ದರೂ ಇಲ್ಲದಿದ್ದರೂ ರಾಧೆ ಚಿಂತಿತಳೇ ಆಗಿರುತ್ತಿದ್ದಳು. ಈ ಕೊಳಲು ಹಾಗಲ್ಲ, ಸದಾ ಕೃಷ್ಣನ ಬಳಿಯಿರುವ ಅದು ತನಗಿಂತ ಹೆಚ್ಚು ಪುಣ್ಯ ಮಾಡಿದೆ ಎನ್ನುತ್ತಿತ್ತು ರಾಧೆಯ ಮನ. ಕೃಷ್ಣ ಇಲ್ಲದಿರುವ ಸಮಯ ನೋಡಿಕೊಂಡು ಈ ಕುರಿತು ಕೊಳಲನ್ನೇ ಕೇಳಿಬಿಡಬೇಕು ಎಂದು ತವಕಿಸುತ್ತಿದ್ದಳು ರಾಧೆ. ಆದರೆ ಆ ಮುರಳಿ ಮುರಾರಿಯ ಕೈಯಿಂದ ಜಾರಿದರೆ ತಾನೇ! ಆತ ನಿದ್ರಿಸುವಾಗಲೂ ಅದು ಅವನ ಸೊಂಟದಲ್ಲಿ ಇರುತ್ತಿತ್ತು. ಅವರಿಬ್ಬರ ನಡುವಿನ ಅವಿನಾಭಾವ ಸಂಬಂಧಕ್ಕೆ ಅದುವೇ ಸಾಕ್ಷಿ.

ಎಲ್ಲಾ ಬಲ್ಲ ಅರಿಷ್ಟನೇಮಿಗೆ ರಾಧೆಯ ಮನದ ಇಂಗಿತ ಅರಿಯುವುದು ಕಷ್ಟವೇ? ಒಮ್ಮೆ ಕೃಷ್ಣ ಬೇಕೆಂದೇ ಕೊಳಲನ್ನು ಸೊಂಟದಿಂದ ತೆಗೆದು ಪಕ್ಕದಲ್ಲಿಟ್ಟು ನಿದ್ರೆ ಹೋಗುವವನಂತೆ ನಟಿಸಿದ. ಆಗ ಅದನ್ನು ಕೈಗೆ ಎತ್ತಿಕೊಂಡ ರಾಧೆ ತನ್ನ ಮನವನ್ನು ದುಂಬಿಯಂತೆ ಕೊರೆಯುತ್ತಿದ್ದ ಪ್ರಶ್ನೆ ಕೇಳಿದಳು.

ಆಗ ಕೊಳಲು 'ತಾಯೇ ನೀನೇನು ಕೇಳುತ್ತಿರುವೆ ನನಗೆ ತಿಳಿಯದು. ಒಂದು ಕೊಳಲಿನಲ್ಲಿ ಏನಿದೆ? ಕೃಷ್ಣ ಅದನ್ನು ಬಿಗಿಯಾಗಿ ಹಿಡಿದಿದ್ದಾನೆ ಎಂದರೆ ಅದಕ್ಕೆ ನನ್ನ ಹತ್ತಿರ ಉತ್ತರವಿಲ್ಲ. ನನ್ನನ್ನು ಒಮ್ಮೆ ಸರಿಯಾಗಿ ನೋಡು ಏನಿದೆ ನನ್ನಲ್ಲಿ? ನಾನೊಂದು 'ಬಿದಿರು ಕೋಲು' ಅದರಲ್ಲಿ ಹತ್ತಾರು ರಂಧ್ರಗಳು ಒಡಲೆಲ್ಲಾ ಖಾಲಿ ಖಾಲಿ ಇದರಲ್ಲಿ ನನ್ನ ಪಾತ್ರ ಏನೂ ಇಲ್ಲ. ಕೃಷ್ಣನ ಕೈಯಲ್ಲಿ ಇರುವುದರಿಂದ, ಅವನು ನನ್ನಿಂದ ಅದ್ಭುತ ರಾಗ ಹೊರಡಿಸುವುದರಿಂದ ನಾನು ಏನೋ ಆಗಿಹೋಗಿದ್ದೇನೆ. ಇದು 'ಕೃಷ್ಣನ ಕೃಪೆ'ಯೇ ಹೊರತು ನನ್ನದೇನೂ ಇಲ್ಲ. ಕೃಷ್ಣನು ನಿನಗೂ ಸಮೀಪವಾಗಿ ನನ್ನಂತೆ ನಿನ್ನ ಬಳಿಯೂ ಇರಬೇಕೆಂದರೆ 'ನೀನು ನಿನ್ನ ಹೃದಯ ಖಾಲಿ ಮಾಡಿಕೋ, ಯಾವ ಹೃದಯದಲ್ಲಿ ಸಿಟ್ಟು, ಸೆಡವು, ಕಪಟದಂತಹ ಕಲ್ಮಶಗಳು ಕಡಿಮೆ ಇರುತ್ತದೆಯೋ ಅಥವಾ ಇಲ್ಲವೇ ಇಲ್ಲವೋ ಅಲ್ಲಿ ಭಗವಂತ ನೆಲೆಸುತ್ತಾನೆ. ಕೊಂಚವೇ ಜಾಗ ಸಿಕ್ಕಿದರೂ ಆವರಿಸಿ ಅಲ್ಲಿರುವ ವಿಷವನ್ನು ಹೊರಹಾಕುತ್ತಾನೆ. ಆಗ ನೀನೂ ಭಗವಂತನ ಸಾಂಗತ್ಯದಲ್ಲೇ ಇರುತ್ತೀಯೇ ಎಂದಿತು. ರಾಧೆಯ ಮನ ಪುಳಕಗೊಂಡಿತು.

ಭಗವಂತನನ್ನು ಮಂದಿರದಲ್ಲೋ, ಗೋಪುರದಲ್ಲೋ ಅರಸುವ ಅಗತ್ಯ ಇಲ್ಲ. ಪ್ರತಿಯೊಬ್ಬರ ಹೃದಯ ಮಂದಿರವೂ ಆತನ ಆವಾಸಸ್ಥಾನವೇ ಆದರೆ ಅಲ್ಲಿ ಅವನ ಠಿಕಾಣಿ ನಿರಂತರವಾಗಿ ಇರಬೇಕೆಂದರೆ, ಕಲ್ಮಶಗಳು ಸೇರಿಕೊಳ್ಳದಂತೆ ಈ ಮಂದಿರವನ್ನು ನಾವು ಶುಭ್ರವಾಗಿ ಚೊಕ್ಕಟವಾಗಿಟ್ಟುಕೊಳ್ಳಬೇಕು.



◆ **ಛಾಯಾ ಭಗವಾನ್**
**9980162364**

## ಜನನ

- ಸಂಘದ ಸದಸ್ಯ ಎಸ್. ಗುರುಪ್ರಸಾದ್ ಮತ್ತು ಶ್ರೀಮತಿ ಸವಿತಾ ದಂಪತಿಗಳ ಮಗಳು ಶ್ರೀಮತಿ ಶ್ವೇತಾ ದಂಪತಿಗಳಿಗೆ ದಿನಾಂಕ 15–02–2019 ರಂದು ಹೆಣ್ಣು ಮಗು ಜನನವಾಗಿದೆ.
- ಸಂಘದ ಪೋಷಕ ಶ್ರೀ ವೆಂಕಟಸುಬ್ಬರಾವ್ ಮತ್ತು ಶ್ರೀಮತಿ ಲಲಿತಾ ದಂಪತಿಗಳ ಮಗಳು ಶ್ರೀಮತಿ ರಾಧಾ ಶ್ರೀಕಾಂತ್ ದಂಪತಿಗಳಿಗೆ, ಸಿಂಗಪೂರದಲ್ಲಿ ದಿನಾಂಕ 06–03–2019ರಂದು ಗಂಡು ಮಗು ಜನನವಾಗಿದೆ.
- ಸಂಘದ ಪೋಷಕ ಶ್ರೀ ಆರ್.ಎಸ್. ವೆಂಕಟೇಶ್ ಮತ್ತು ಶ್ರೀಮತಿ ರಾಧಾ ವೆಂಕಟೇಶ್ ದಂಪತಿಗಳ ಮಗಳು ಶ್ರೀಮತಿ ದೀಪ್ತಿ ಮತ್ತು ಶ್ರೀ ಅಜಯ್ ದಂಪತಿಗಳಿಗೆ ಅಮೆರಿಕಾದಲ್ಲಿ ದಿನಾಂಕ 08–03–2019ರಂದು ಹೆಣ್ಣು ಮಗು ಜನನವಾಗಿದೆ.

---

- ಸಂಘದ ಪೋಷಕ ಶ್ರೀ ಆರ್.ಜಿ. ಶೇಷಾಚಲಂರವರ ಮೊಮ್ಮಗು ಚಿ. ಶಿವೇನ್‌ಗೆ ದಿನಾಂಕ 25–12–2018ರಂದು ಅಕ್ಷರಾಭ್ಯಾಸ ಮಾಡಿಸಲಾಯಿತು.

**ಎಲ್ಲಾ ಪುಟ್ಟು ಮಕ್ಕಳಿಗೆ ಸಂಘದ ಆಶೀರ್ವಾದಗಳು.**



# ಶ್ರೀ ಗುರು ದತ್ತಾತ್ರೇಯ–ತತ್ತ್ವಾರ್ಥ ಚಿಂತನೆ

**ಪು**ರಾಣಗಳ ಮೂಲಕ ಶ್ರೀ ಗುರು ದತ್ತಾತ್ರೇಯನ ಕಥೆಯನ್ನು ನಾವೆಲ್ಲಾ ಕೇಳುತ್ತಾ ಬಂದಿದ್ದೇವೆ. ತಂದೆ ಅತ್ರಿ ಮುನಿಗಳು, ತಾಯಿ ಅನಸೂಯಾ ದೇವಿ. ಅತ್ರಿ ಎಂದರೆ ತ್ರಿಗುಣಗಳಾದ ಸತ್ತ್ವ, ರಜೋ, ತಮೋ ಗುಣಗಳಿಗೆ ಅತೀತವಾದವರು ಮತ್ತು ಅನಸೂಯಾ ಎಂದರೆ ಅಸೂಯೆ ಇಲ್ಲದವರು. ಇಂತಹ ದಂಪತಿಗಳ ಸುಪುತ್ರನಾಗಿ ಬ್ರಹ್ಮ, ವಿಷ್ಣು, ಮಹೇಶ್ವರರ ಅಂಶವನ್ನು ಅಭೇದವಾಗಿ ಕಾಣುವಂತೆ ಅವತರಿಸಿದ ದತ್ತಾತ್ರೇಯನು ನಮಗೆಲ್ಲಾ ಗುರುಸ್ವರೂಪನೇ ಆಗಿದ್ದಾನೆ. ದತ್ತಾತ್ರೇಯನ ಸಗುಣ ರೂಪದ ವಿಶ್ಲೇಷಣೆ ಈ ರೀತಿ ಮಾಡಬಹುದು.

**ಕಮಂಡಲ :** ಕಮಂಡಲವು ತ್ಯಾಗದ ಸಂಕೇತ. ತ್ಯಾಗ ಎಂದರೆ ಪ್ರಪಂಚವು ಅಶಾಶ್ವತವಾದುದು. ಆದರೆ ಅದರ ಅರಿವಿಲ್ಲದೆ ಅಜ್ಞಾನದಿಂದ ಅದು ಶಾಶ್ವತವೆಂದು ಭ್ರಮಿಸುತ್ತಿರುತ್ತೇವೆ. ಈ ತಪ್ಪು ತಿಳುವಳಿಕೆಯನ್ನು ತ್ಯಾಗ ಮಾಡಬೇಕು.

**ಜಪಮಾಲೆ :** ಜಪಮಾಲೆಯನ್ನು ಕೈಯಲ್ಲಿ ಹಿಡಿದಿರುವುದು ಸತತ ಜಪವು ಸಾಧನಾ ಮಾರ್ಗದಲ್ಲಿ ಬಹುಮುಖ್ಯವಾದುದು. ಮಾನವನಿಗೆ ಪ್ರಕೃತಿದತ್ತವಾದ ಮೂರು ಗುಣಗಳು ಈ ಶರೀರವಿರುವ ತನಕ ಅಸಮ ಮಿಶ್ರದಲ್ಲಿರುತ್ತದೆ. ಸತತ ಜಪದಿಂದ ಗುಣಗಳಿಗೆ ವಶವಾಗದೆ ಗುಣಾತೀತನಾಗುವ ಪ್ರಯತ್ನ ಮಾಡುವುದು ಅವಶ್ಯಕ.

**ಶಂಖ, ಚಕ್ರ :** ಶಂಖವು ಮಾನವ ಜನ್ಮವು, ಅತ್ಯಲ್ಪ ಕಾಲದ್ದು, ದೊರಕಿರುವ ಅತ್ಯಲ್ಪ ಕಾಲದಲ್ಲೇ ಜ್ಞಾನಪೂರ್ಣವಾಗಿ ಬದುಕಬೇಕು ಎಂದು ತಿಳಿಸುತ್ತದೆ. ಚಕ್ರವು ಕಾಲಚಕ್ರವನ್ನು ಸೂಚಿಸಿ ಅದರಲ್ಲಿ ಬರುವ ಸಕಲ ಚರಾಚರಗಳು ಕಾಲದ ಅಧೀನ ಎಂಬ ಅರ್ಥವನ್ನು ಬಿಂಬಿಸುತ್ತದೆ.

**ತ್ರಿಶೂಲ :** ತ್ರಿಶೂಲವು ಮಾನವನಲ್ಲಿ ಸಹಜವಾಗಿ ಇರುವ ಜಾಗೃತ, ಸ್ವಪ್ನ, ಸುಷುಪ್ತಿ ಅವಸ್ಥೆಗಳಿಂದ ಅತೀತವಾದ ಸ್ಥಿತಿಯ ಸಂಕೇತ.

**ಡಮರುಗ :** ಡಮರುಗದ ಒಳಗೆ ಟೊಳ್ಳು, ಅದರ ಹೊರಗಿರುವ ದಾರದಿಂದಲೇ ಶಬ್ದದ ಉಗಮವಾಗುವುದು. ಅಂದರೆ ಜೀವಾತ್ಮವು ಯಾವಾಗಲೂ ಪರಮಾತ್ಮನ ಅಂಶವಾಗಿರುವುದರಿಂದ ಗೊತ್ತಿದ್ದರೂ, ಗೊತ್ತಿಲ್ಲದಿದ್ದರೂ ಅವನ ಅಧೀನದಲ್ಲೇ ಇರುತ್ತದೆ.

**ಜೋಳಿಗೆ :** ಅವಧೂತನಾದ ದತ್ತಾತ್ರೇಯನು ಜೋಳಿಗೆಯೊಂದಿಗೆ ಭಿಕ್ಷೆ ಬೇಡಿ ಭುಂಜಿಸುವುದು, ನಮ್ಮಲ್ಲಿರುವ ಅಹಂಕಾರ ಪ್ರವೃತ್ತಿಯನ್ನು ಕಳೆದುಕೊಳ್ಳುವುದು ಎಂಬುದರ ಸಂಕೇತ.

**ಶಿಖೆ :** ದತ್ತಾತ್ರೇಯನ ತಲೆಯಲ್ಲಿರುವ ಶಿಖೆಯು ಅಗ್ನಿಯಂತೆ ಪರಿಪೂರ್ಣ ಜ್ಞಾನದ ಸಂಕೇತ.

**ವಸ್ತ್ರ :** ಕೇಸರಿ ಬಣ್ಣದ ಉಟ್ಟ ವಸ್ತ್ರವು ಪ್ರಪಂಚದ ವಿಷಯಗಳು ಅವರಲ್ಲಿ ಜ್ಞಾನಾಗ್ನಿಯಿಂದ ದಗ್ಧವಾಗಿ ಪರಿಶುದ್ಧವಾದ ಭಕ್ತಿ ಮೈದುಂಬಿರುವುದರ ಸಂಕೇತ.

**ಗೋವು :** ಕಲ್ಪತರುವಾದ ಗೋವು ಧರ್ಮಾಧಾರಿತ ಪ್ರಾಪಂಚಿಕ ಇಚ್ಛೆಗಳನ್ನು ಪೂರೈಸುವ ಸಂಕೇತ.

**ನಾಲ್ಕು ಶ್ವಾನಗಳು :** ಋಗ್, ಯಜುರ್, ಸಾಮ, ಅಥರ್ವ ವೇದಗಳೇ ನಾಲ್ಕು ಶ್ವಾನಗಳಾಗಿ ಮನುಷ್ಯರನ್ನು "ನೀವು ಅಮೃತಾತ್ಮರೇ" ಎಂದು ಸದಾ ಎಚ್ಚರಿಸುತ್ತಾ ಇರುತ್ತದೆ.

**ಪಾದುಕೆ :** ಗುರು ನಡೆದ ಪಥದಲ್ಲಿ ನಡೆದದ್ದೇ ಆದರೆ ಶಿಷ್ಯನಾದವನು ಸುಲಭವಾಗಿ ತಾನೂ ಅವರಂತೆ ನಡೆದು ಆತ್ಮದರ್ಶನ ಮಾಡಬಹುದು ಎಂಬುದರ ಸಂಕೇತ.

**ಔದುಂಬರ ವೃಕ್ಷ :** ದತ್ತಾತ್ರೇಯನ ಆವಾಸಸ್ಥಾನವೇ ಔದುಂಬರ ವೃಕ್ಷ. ಈ ವೃಕ್ಷದ ಬೀಜವು ಪಕ್ಷಿಗಳ ಮೂಲಕ ಪ್ರಸರಿಸುವುದು ಇದರ ವಿಶೇಷ. ಅಲ್ಲದೇ ಸದಾ ಆಮ್ಲಜನಕವನ್ನು ಹೊರಸೂಸುವುದು ದೈವದತ್ತ ಕೊಡುಗೆಯಾಗಿದೆ.

ಶ್ರೀ ಗುರು ದತ್ತಾತ್ರೇಯನನ್ನು ಗುರುಚರಿತ್ರೆ ಗ್ರಂಥದ ಮೂಲಕ ಪಾರಾಯಣ ಮಾಡುವುದು ಆಚರಣೆಯಲ್ಲಿದೆ. ಗುರುಚರಿತ್ರೆಯ ನಿಯಮಾನುಸಾರ ಶ್ರದ್ಧಾ, ಭಕ್ತಿಗಳಿಂದ ಪಾರಾಯಣ ಮಾಡಿದ್ದೇ ಆದರೆ, ಲೌಕಿಕ ಇಚ್ಛೆಗಳು ಮತ್ತು ಅಲೌಕಿಕ ಸಾಧನೆಗಳು ಫಲಪ್ರದವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದಿರುವರು ಸಾಧಕರು.

**ಆರ್. ರಮೇಶ್**

ಮಾನ್ಯರೇ,

ಇತ್ತೀಚಿನ ವರ್ಷಗಳಲ್ಲಿ ನಮ್ಮ ಪಂಗಡದ ಹಲವಾರು ಯುವಕ ಯುವತಿಯರು ವಿದ್ಯಾಭ್ಯಾಸ ಪೂರೈಸಿ ಉದ್ಯೋಗಸ್ಥರಾಗಿರುತ್ತಾರೆ. ಇಂತಹವರು ಬೃಹಚ್ಚರಣ ಸಂಘದ ಸದಸ್ಯರಾಗಿ ಸಂಘದ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕೆಂದು ಕಾರ್ಯಕಾರಿ ಸಮಿತಿ ಅಪೇಕ್ಷಿಸುತ್ತದೆ. ಸಂಘದ ಉಳಿವು ಹಾಗೂ ಬೆಳವಣಿಗೆಗೆ ಇದು ಅವಶ್ಯಕವಾಗಿದೆ.

**ಎಂ.ಎಂ.ಡಿ.ಬಿ.ಎಸ್.**

# 2019 ನಾಗಾರಾಧನೆಯ ಛಾಯಾಚಿತ್ರಗಳು

















# 2019 ನಾಗಾರಾಧನೆಯ ಛಾಯಾಚಿತ್ರಗಳು



















ಕಾರ್ಯಕಾರಿ ಸಮಿತಿ ಸದಸ್ಯರು



# 2019 ನಾಗಾರಾಧನೆಯ ಛಾಯಾಚಿತ್ರಗಳು




ಪ್ರಸಾದರೂಪ ಭೋಜನ








# ನಮ್ಮವರ ಮನೆಗಳಲ್ಲಿ "ಸಂಕ್ರಾಂತಿ"















**ಸಂಕ್ರಾಂತಿ ಹಬ್ಬ**

ನೆನಪಿಸುತಿದೆ
ನಮ್ಮ ಸುಸಂಸ್ಕೃತಿಯ ಆಳ
ಎಳ್ಳು ಬೀರಲು ಓಡಾಡುತಿಹ
ಅಂದದುಡುಗೆಗಳನುಟ್ಟ
ಹೆಂಗಳೆಯರ ನರ್ತನದ ತಾಳ

ಕಬ್ಬಿನೊಡನೆ ಸಕ್ಕರೆಯಚ್ಚಿನ
ಒಡನಾಟ
ಎಳ್ಳು ಬೆಲ್ಲಕೊಬ್ಬರಿಗಳ
ಜೊತೆಯಾಟ
ಹೊಲದಿ ದುಡಿವ ರೈತನ
ಸಂತೃಪ್ತಿಯೂಟ
ಚೈತ್ರಾಗಮನಕೆ
ಅಣಿಯಾಗುತಿಹ
ಪ್ರಕೃತಿಯ ರಮ್ಯ ನೋಟ
ಸೂರ್ಯ ಉತ್ತರಕೆ
ಹೊರಳಿ, ಚಳಿರಾಯನ
ಓಡಿಸುವ ಆಟ

ಮಕರಜ್ಯೋತಿಯು
ಬೆಳಗಲಿ
ಎಲ್ಲರೆದೆಗಳಲಿ
ಆಗುತ ಜೀವನ
ರಸದೂಟ....



**ನಾಗಭೂಷಣ್**

# ಸಂಕ್ರಾಂತಿ

ಹಿತಬುಕ್, ಋತಬುಕ್–ಮಿತಬುಕ್ ಅಂದರೆ ಋತು ಹಿತ–ಮಿತ ಇವು ಮೂರರಿಂದ ಕೂಡಿದ ಆಹಾರವನ್ನು ಪ್ರಕೃತಿ ಜೀವಿಗಳಿಗೆ ಕೊಡುತ್ತದೆ. 'ಋತುಧರ್ಮಕ್ಕೆ ಅನುಗುಣವಾಗಿ ಆಹಾರವನ್ನು ಹಿತ–ಮಿತವಾಗಿ ತೆಗೆದುಕೊಂಡರೆ ಆರೋಗ್ಯ' ಎಂಬ ಸೂತ್ರವನ್ನು ಹಿರಿಯರು ಮಾಡಿರುವರು. ಚಳಿಗಾಲ ಮುಗಿದ ತಕ್ಷಣ 'ಮಕರ ಸಂಕ್ರಾಂತಿ ಹಬ್ಬ' ಅಗತ್ಯ. ಆರೋಗ್ಯಕ್ಕೆ ಆನಂದಕ್ಕೆ ಪರಸ್ಪರ ನೆಂಟಸ್ಥಿಕೆಯನ್ನು ಎಳ್ಳು ಕೊಟ್ಟು ಒಳ್ಳೆ ಮಾತಾಡಿ ಸಂಭ್ರಮಿಸುವುದು ಸಂಕ್ರಾಂತಿ.

ಕರ್ಕಾಟಕ ರಾಶಿಯಿಂದ ಉತ್ತರಾಯಣದ ಮಕರ ರಾಶಿಗೆ ದಿಕ್ಕು ಬದಲಾವಣೆ. ಸೂರ್ಯದೇವ ಪ್ರತ್ಯಕ್ಷ ನಾರಾಯಣ. ಇನ್ನು ಹಿಮಗಾಲ ಚಳಿ ಹಿಂದಕ್ಕೆ ಸರಿದು ಬೇಸಿಗೆ ಆರಂಭ. ಪೂರ್ವದಿಂದ ಆಚರಣೆ. ಸೂರ್ಯ–ಭೂಮಿನಂಟು ಪ್ರಕೃತಿ ಆರಾಧನೆ. ಜೀವರಾಶಿಗೆ ಅಗತ್ಯವಾದ ಹಬ್ಬ. ಎಲ್ಲಾ ಹಬ್ಬಗಳು ಆರಾಧನೆ–ಆಚರಣೆ. ಇದನ್ನು ಆಲೋಚಿಸಿದರೆ ಹೊಳೆಯುವುದು. ಆರೋಗ್ಯ ಸೂತ್ರವು ಇರುವುದು. ಚಳಿಗೆ ಮೈಚರ್ಮ ಬಿರುಕುಬಿಟ್ಟು ಒಣಚರ್ಮ ಆಗುವುದು. ಆಗ ತೈಲ ಅಗತ್ಯ. ಎಳ್ಳೆಣ್ಣೆ, ಕೊಬ್ಬರಿಎಣ್ಣೆ, ಕಡ್ಲೆಬೀಜದ ಎಣ್ಣೆ, ಈ ಮೂರು ಮಿಶ್ರದ ಪಿತ್ತ ಪರಿಹಾರಕ್ಕೆ ಬೆಲ್ಲ ಅದಕ್ಕೆ ಸಕ್ಕರೆ ಅಚ್ಚು ಕಬ್ಬು, ಹಣ್ಣು ಅಗತ್ಯ. ಕುಸುರಿಕಾಳು, ಜೀರಿಗೆ ಪೆಪ್ಪರ್‌ಮೆಂಟು ಮಿಶ್ರ. ಅಂದವಾಗಿ ಹೆಣ್ಣುಮಕ್ಕಳು ಅಲಂಕಾರ ಮಾಡಿಕೊಂಡು ಕೃಷ್ಣನನ್ನು ಎತ್ತಿಕೊಂಡು ಬೊಂಬೆ ಎಳ್ಳು ಎಂದು ಕೊಡುವ ಸಂಪ್ರದಾಯವಿತ್ತು. ಈಗ ಆಧುನಿಕಕ್ಕೆ ಎಲ್ಲವೂ ಶ್ರಮವಿಲ್ಲದೆ ದೊರೆವುದು. ಎಳ್ಳು ಕಳುಹಿಸುವುದು ಅಷ್ಟೇ. ಈ ಧಾರ್ಮಿಕ ಆಚರಣೆ ಪರಸ್ಪರ ನೆಂಟರು, ಸ್ನೇಹಿತರು ಒಬ್ಬರನ್ನೊಬ್ಬರ ಭೇಟಿ ಕೊಡುತ್ತಿತ್ತು. ಈಗ ಕಾಲ ಬದಲಾಗಿದೆ 'ಹಳೇಬೇರು ಹೊಸ ಚಿಗುರು' ಎಂಬಂತೆ. ಮನೆಯಲ್ಲಿ ಪುಟ್ಟ ಮಕ್ಕಳಿದ್ದರೆ ಬೆಳ್ಳಿ ಕೃಷ್ಣನನ್ನು ಎಳ್ಳಿನ ಜೊತೆ ಬೀರುವುದು 'ಸಂಪ್ರದಾಯ' ಬೆಳ್ಳಿತಟ್ಟೆ ಬಟ್ಟಲು. ಮೇಲೆ ಕ್ರೋಶ ಕಲೆಯಿಂದ ತಯಾರಾದ ಮುಸುಕು. ವಿಧವಿಧವಾದ ಕಲಾ ಪ್ರದರ್ಶನವಾಗುತ್ತಿತ್ತು. ಇಷ್ಟು ಧಾರ್ಮಿಕ ಆಚರಣೆ.

**ಹಳೆ ಸೂರ್ಯ ಹಳೆ ಚಂದ್ರ ಹಳೆ ಭೂಮಿ ಹಳೆ ನೀರು**
**ಹಳೆ ಹಿಮಾಚಲ ಗಂಗೆ ಹಳೆ ವಂಶಚರಿತೆ**



**ಹಳೆಯವಿವು ನೀನದರೊಳಾವುದನು ಕಳೆದಿಯೋ?**
**ಹಳದು ಹೊಸತರಳಿರದೆ –ಮಂಕುತಿಮ್ಮ**

ಪೂಜ್ಯ ಡಿ.ವಿ.ಜಿ. ಅವರು ಹಳೆಬೇರು ಹೊಸಚಿಗುರು ಯಾವುದೂ ಹೊಸತಲ್ಲವೆಂದಿದ್ದಾರೆ.

ಹಳ್ಳಿಗಳಲ್ಲಿ ಬಯಲಿನಲ್ಲಿ ಹೊಸ ಧಾನ್ಯರಾಶಿಗೆ ಪೂಜೆ, ಎತ್ತುಗಳಿಗೆ ಅಲಂಕಾರ, 'ಕಿಚ್ಚು ಹಾಯಿಸುವುದು' (ಅಗ್ನಿಯಲ್ಲಿ ಅವುಗಳನ್ನು ಓಡಿಸುವುದು) ಕೀಟಗಳ ನಾಶ ಗೋವಿನ ಆರೋಗ್ಯ ವೃದ್ಧಿ, 'ಪೊಂಗಲ್' ಹಬ್ಬ ತಮಿಳರಿಗೆ, 'ಪೆದ್ದ ಪಂಡುಗ' ಆಂಧ್ರದವರಿಗೆ.

**ಪೌರಾಣಿಕ ಹಿನ್ನೆಲೆ :** ತಿಲಾಸುರ ಎಂಬುವ ಲೋಕ ಕಂಟಕ ರಾಕ್ಷಸ ಬ್ರಹ್ಮನಿಂದ ವರ ಪಡೆದಿದ್ದ. ಅವನ ಹಾವಳಿ



ಹೇಳತೀರದು. ಆಗ ಸೂರ್ಯ ಮಕರ–ಕರ್ಕ ಎಂಬುವರನ್ನು ತಿಲನ ಸಂಹಾರಕ್ಕೆ ಕಳುಹಿಸಿದ. ಮಕರ, ತ್ರಿಶೂಲದಿಂದ ತಿಲಾಸುರನ ಉದರಕ್ಕೆ ತಿವಿದ ಆಗ ರಾಶಿ–ರಾಶಿಯಾಗಿ ಉದರದಿಂದ ಎಳ್ಳು ಬಿತ್ತು. ರಕ್ಕಸ ಸತ್ತಾಗ ಸೂರ್ಯ ಸಂತೋಷದಿಂದ ಸಾಹಸ ಹೊಗಳಿ ಮಕರ ಸಂಕ್ರಮಣ ಕಾಲದಲ್ಲಿ ಎಳ್ಳು ಪೂಜಿಸಿದವರಿಗೆ ಒಳಿತಾಗಲಿ ಎಂದು ಹಾರೈಸಿದ. ಇದರ ನೆನಪಿಗೆ ಎಳ್ಳು ಬೀರುವ ಸಂಪ್ರದಾಯ.

ಮನೆಯಲ್ಲಿ ಹೆಣ್ಣುಮಕ್ಕಳು ಎಳ್ಳು ಬೀರಿ ಸಂತೋಷ ಪಟ್ಟರೆ ಗಂಡುಮಕ್ಕಳಿಗೆ ಸಕ್ಕರೆ ಕಾಳಿನ ಹಾರ ಹಾಕಿ ಬೊಟ್ಟು ಇಟ್ಟು ಹೊಸಬಟ್ಟೆ ಕೊಟ್ಟು, ಸಾಯಂಕಾಲ ಎಲ್ಲಾ ಮಕ್ಕಳನ್ನು ಹಸೆಮಣೆ ಮೇಲೆ ಕೂರಿಸಿ ಆರತಿ ಎತ್ತಿ ಕಡೆಯಲ್ಲಿ ಕಬ್ಬಿನ ಚೂರು, ಎಲಚಿಹಣ್ಣು, ಚಿಲ್ಲರೆ ಕಾಸುಗಳು ತಲೆಯ ಮೇಲೆ ಸುರಿದು ಸಂಭ್ರಮಿಸುವವರು. ಹಿರಿಯರ, ದೇವರ ಆಶೀರ್ವಾದ ಪಡೆಯುವರು. ಒಟ್ಟಿನಲ್ಲಿ ಪ್ರಕೃತಿಯಲ್ಲಿ ಎಲ್ಲಾ ಹಿರಿಯ ಕಿರಿಯ ಜೀವಗಳು, ಧಾನ್ಯಗಳು, ಗೋವುಗಳು, ರೈತರು ಆನಂದದಿಂದ ಸುಗ್ಗಿಹಬ್ಬ, ಹಿಗ್ಗಿನಿಂದ ಆಚರಿಸುವರು. ಕಲಾಪ್ರದರ್ಶನಕ್ಕೆ ದೊಡ್ಡ ರಂಗೋಲಿ ಬಣ್ಣ ಬಣ್ಣದಿಂದ ಮೂಡುವುದು.



◆ **ಭ್ರಮರಾ ಗೋಪಿನಾಥ್**
**26677574**

# ನಾಗಾರಾಧನೆಯಂದು ಸದಸ್ಯರು ನೀಡಿರುವ ದೇಣಿಗೆಯ ವಿವರ

ಶ್ರೀಯುತರು

## ಸದಸ್ಯತ್ವಕ್ಕೆ ಸ್ವೀಕೃತ ದೇಣಿಗೆ

| | |
|---|---|
| ಎ.ಜಿ. ರಘುನಂದನ್ | 1,000.00 |
| ಮುರಳಿ ಅನಂತರಾಮ್ | 1,000.00 |
| ಡಾ. ಎ.ಆರ್. ರಘು | 1,000.00 |
| ಕೆ.ವಿ. ರಾಧಾಕೃಷ್ಣ | 1,000.00 |
| ಬಿ.ವಿ. ನಾಗಪದ್ಮಿನಿ | 1,000.00 |
| ಡಿ.ಎ. ಸತೀಶ್ ಶರ್ಮಾ | 1,000.00 |

## ವಾರ್ಷಿಕ ನಿರ್ವಹಣೆಗೆ ಸ್ವೀಕೃತ ದೇಣಿಗೆ

| | |
|---|---|
| ಎಂ.ಆರ್. ವಿಶ್ವೇಶ್ | 500.00 |
| ಕುಮಾರಿ. ಧಾತ್ರಿ | 500.00 |
| ರಾಹುಲ್ ಶ್ರೀನಿವಾಸ | 500.00 |
| ಎಂ.ಆರ್. ಜಯರಾಮ್ | 500.00 |
| ಜಿ.ಪಿ. ಲಕ್ಷ್ಮಿದೇವಿ | 500.00 |
| ಎಸ್. ಶ್ರೀನಿವಾಸನ್ | 500.00 |
| ಆರ್.ಎಸ್. ಮಹೇಶ್ | 500.00 |
| ಆರ್.ಎನ್. ಮಂಜುನಾಥ್ | 500.00 |
| ಕುಪ್ಪಸ್ವಾಮಿ | 500.00 |
| ಇಂದಿರಮ್ಮ | 500.00 |
| ಎಸ್. ಶ್ರೀನಿವಾಸಯ್ಯ | 500.00 |
| ಎಸ್.ಎನ್. ಕೃಷ್ಣಮೂರ್ತಿ | 500.00 |
| ಕೆ.ಸಿ. ನಟರಾಜ್ | 500.00 |
| ಆರ್.ಸಿ. ಉಮೇಶ್ | 500.00 |
| ಸರಸ್ವತಿ ಕೆ.ಸಿ. ನಟರಾಜ್ | 500.00 |
| ಎನ್. ಶಿವಕುಮಾರ್ | 500.00 |
| ಮಮತಾ ಶಿವಕುಮಾರ್ | 500.00 |
| ಶುಭಾ ಗಾಯತ್ರಿ | 500.00 |
| ರಜನಿ ಶ್ರೀವತ್ಸ | 500.00 |
| ರಜನಿ ದತಾ | 500.00 |
| ಆರ್.ಕೆ. ನಾಗಲಕ್ಷಮ್ಮ | 500.00 |
| ಎ.ಆರ್. ಪ್ರಸಾದ್ | 500.00 |
| ಆರ್.ಎಸ್. ಅನಂತರಾಮ್ | 500.00 |
| ಎ. ವೆಂಕಟೇಶ್ | 500.00 |
| ಆರ್.ಎನ್. ಸ್ವಾಮಿನಾಥನ್ | 500.00 |
| ಜಿ.ಎನ್. ಪ್ರಸಾದ್ | 500.00 |
| ಉಮಾ ಜಯರಾಮ್ | 500.00 |
| ಆರ್. ವೆಂಕಟೇಶ್ ಪ್ರಸಾದ್ | 500.00 |
| ಗಾಯತ್ರಿ ದೇವಿ | 500.00 |
| ಶ್ರೀಕಂಠಯ್ಯ | 500.00 |
| ರಘುನಾಥ್ | 290.00 |
| ಶಾಮ್ ಸುಂದರ್ | 500.00 |
| ಆರ್. ಶ್ರೀಕಾಂತ್ | 500.00 |
| ಎಸ್. ರವಿ ಶಂಕರ್ | 500.00 |
| ಎಸ್. ವೈದ್ಯನಾಥ್ | 500.00 |
| ಎಸ್. ದ್ವಾರಕಾನಾಥ್ | 500.00 |
| ಆರ್.ಎಸ್. ಭಗವಾನ್ | 500.00 |
| ಕೆ.ಆರ್. ಲಕ್ಷ್ಮಿನಾರಾಯಣ್ | 500.00 |
| ಉಮಾ ಗೋವಿಂದ್ | 500.00 |
| ಎಸ್. ವೆಂಕಟೇಶ್ | 500.00 |
| ಆರ್. ದಿಲೀಪ್ ಕುಮಾರ್ | 500.00 |
| ಎಸ್.ಆರ್. ಲಲಿತಾ | 500.00 |
| ತಾರಾ ರವೀಂದ್ರ | 500.00 |
| ಭಾರ್ಗವ್ | 500.00 |
| ಎ.ಆರ್. ಸುಬ್ಬರಾವ್ | 500.00 |
| ಜಿ.ಎಸ್. ವೇಣುಗೋಪಾಲ್ | 500.00 |
| ರವಿಶಂಕರ್ | 500.00 |
| ಟಿ.ಎಸ್. ರಾಮ್ ಸ್ವರೂಪ್ | 500.00 |
| ಎಂ. ಗಿರಿಜಾ ದೇವಿ | 500.00 |
| ವೆಂಕಟ ಸುಬ್ಬರಾವ್ | 500.00 |
| ಶಿವಶಂಕರ್ | 1,000.00 |
| ಬಿ. ಸೂರ್ಯ ಪ್ರಕಾಶ್ | 500.00 |
| ಬಿ.ಎಸ್. ಸತೀಶ್ | 500.00 |
| ಎಸ್.ಆರ್. ನಾಗಮಣಿ | 500.00 |
| ಬಿ.ಎ. ಲಕ್ಷ್ಮಣ್ ಶರ್ಮಾ | 500.00 |
| ಬಿ. ಯೋಗೇಶ್ | 500.00 |
| ಹೆಚ್.ಜಿ. ಅನಂತ್ | 500.00 |
| ನಾಗರಾಜ್ ಸುಬ್ಬರಾವ್ | 500.00 |
| ವಿ. ವಿನಾಯಕ | 500.00 |
| ವಿ. ಸುಬ್ರಹ್ಮಣ್ಯ | 500.00 |
| ಡಿ. ಸತ್ಯಮೂರ್ತಿ | 500.00 |
| ಬಿ. ವಿಶ್ವೇಶ್ವರ | 500.00 |
| ಬಿ. ಶ್ರೀಧರ್ | 500.00 |
| ಎಸ್. ಪ್ರದೀಪ್ | 500.00 |
| ರಘುನಾಥ್ ಈಶ್ವರ್ | 500.00 |

## ಹುಂಡಿಯಿಂದ ಪಡೆದ ದೇಣಿಗೆ

| | |
|---|---|
| ಇಂದಿರಮ್ಮ | 620.00 |
| ಜಿ.ಎಸ್. ನಾಗರಾಜ್ | 400.00 |
| ಟಿ.ಪಿ. ಜಗನ್ನಾಥ್ | 250.00 |
| ಆರ್.ಎಸ್. ವೆಂಕಟೇಶ್ | 1,005.00 |
| ಆರ್. ರಮೇಶ್ | 650.00 |
| ಶೋಭಾ ಗೋವಿಂದ | 1,000.00 |
| ವಿಶ್ವೇಶ್ ರೂಪಾ | 1,628.00 |
| ಎ.ಆರ್. ಸುಬ್ಬರಾವ್ | 510.00 |
| ಶಂಮಂತಕಮಣಿ | 1,272.00 |
| ಡಿ.ಆರ್. ಕೃಷ್ಣನ್ ಕೃಷ್ಣಮೂರ್ತಿ | 841.00 |
| ಲಲಿತಾ ಕಾಮತ್ | 281.00 |
| ಬಿ.ಜಿ. ಮೋಹನ್ ಗುಪ್ತಾ | 732.00 |
| ಗಾಯತ್ರಿ ಸತ್ಯನಾರಾಯಣ್ | 1,982.00 |
| ಎಸ್. ಕೃಷ್ಣ | 700.00 |
| ಜಿ. ಅಶೋಕ್ ಕುಮಾರ್ | 1,277.00 |
| ಡಾ. ಜಿ. ಸ್ವಾಮಿನಾಥ್ | 1,352.00 |
| ಎಸ್.ಆರ್. ಲಲಿತಾ | 967.00 |
| ತಾರಾ ರವೀಂದ್ರ | 1,010.00 |
| ಹರಿಣಿ | 492.00 |
| ಎನ್.ವಿ. ರಮೇಶ್ | 1,005.00 |
| ಬಿ. ನಾಗರಾಜ್ | 550.00 |
| ನಾಗರಾಜ್ ಸುಬ್ಬರಾವ್ | 321.00 |
| ಎಸ್.ಆರ್. ನಾಗಮಣಿ | 502.00 |

## ಅನ್ನದಾನಕ್ಕಾಗಿ ಸ್ವೀಕೃತ ದೇಣಿಗೆ

| | |
|---|---|
| ಟಿ.ಎಸ್. ಕೃಷ್ಣನ್ | 1,000.00 |
| ಎಸ್. ಉಮೇಶ್ | 5,000.00 |
| ಸುನೀಲ್ ಶೇಖರ್ | 1,501.00 |
| ವಿ.ಎಸ್. ಮೂರ್ತಿ | 1,501.00 |
| ಎಂ.ಆರ್. ಜಯರಾಮ್ | 1,500.00 |
| ಆರ್.ಎಸ್. ವೆಂಕಟೇಶ್ | 1,000.00 |
| ಲೀಲಾ ಶೇಖರ್ | 500.00 |
| ಎ. ಶ್ರೀನಿವಾಸ್ | 500.00 |
| ಜಿ.ಪಿ. ಲಕ್ಷ್ಮಿದೇವಿ | 1,000.00 |
| ಮೀನಾಕ್ಷೀ ಲೇ। ಎಸ್.ಆರ್ ವೆಂಕಟಸುಬ್ಬಯ್ಯನವರ ಪತ್ನಿ | 5,150.00 |
| ಜಿ.ಎಸ್. ಸತ್ಯಮೂರ್ತಿ ಮತ್ತು ರತ್ನಾ ಮೂರ್ತಿ | 1,000.00 |
| ಎಸ್. ಶ್ರೀನಿವಾಸನ್ | 2,000.00 |
| ಅಂಬಾ ನಡವತ್ತಿ | 1,005.00 |
| ಎನ್.ವಿ. ಸುಂದರ್ ನಡವತ್ತಿ | 1,005.00 |
| ಕೆ.ಆರ್. ರಮಾದೇವಿ | 1,000.00 |
| ಎಮ್.ಕೆ. ರವಿಪ್ರಕಾಶ್ | 201.00 |
| ಆರ್.ಎನ್. ವೇಣುಗೋಪಾಲ್ | 101.00 |
| ಆರ್.ಎನ್. ತ್ರಿವೇಣಿ | 201.00 |
| ಕೆ.ಆರ್. ನಾಗರತ್ನ | 201.00 |

| | |
|---|---|
| ಎನ್. ಕಾರ್ತಿಕ್ | 101.00 |
| ವಿ. ರಾಮಸ್ವಾಮಿ | 1,000.00 |
| ಬಿ. ಸುಬ್ರಮಣ್ಯಂ | 1,000.00 |
| ಕೆ.ವಿ. ಲಕ್ಷ್ಮಿಕಾಂತನ್ | 50.00 |
| ಪಾರ್ವತಿ | 500.00 |
| ವನಾಜಾಕ್ಷೀ | 102.00 |
| ಜಿ.ಎಸ್. ನಾಗರಾಜ್ | 100.00 |
| ಜಿ.ಎಸ್. ರಾಮ ಐಯರ್ | 100.00 |
| ಜಿ.ಎಸ್. ಸುಂದರೇಶ್ | 101.00 |
| ಸುಂದರಮ್ಮ | 101.00 |
| ಇಂದಿರಾ ಕೃಷ್ಣಮೂರ್ತಿ | 1,001.00 |
| ಕೆ.ಆರ್. ಶಿವರಾಮ್ | 500.00 |
| ಶಾಂತಲಕ್ಷ್ಮಿ | 500.00 |
| ಸುಧಾ ಶ್ರೀನಾಥ್ | 1,000.00 |
| ನಾಗರತ್ನಾ ಮದುಸೂಧನ್ | 500.00 |
| ಮಂಜುಳಾ ಗೋಪಾಲಸ್ವಾಮಿ | 501.00 |
| ಪಂಕಜ ಜಿ.ಎಸ್. ಮೂರ್ತಿ | 500.00 |
| ಬಿ.ಸಿ. ಕುಮಾರ್ | 1,000.00 |
| ಎ.ಆರ್. ರವಿ | 500.00 |
| ರಾಜೇಶ್ವರಿ | 1,000.00 |
| ಕೆ. ರಾಜಣ್ಣ | 1,000.00 |
| ಎಸ್.ಎಂ. ಜಯರಾಮ್ | 1,000.00 |
| ರಾಜಮ್ಮ | 502.00 |
| ಟಿ.ಜೆ. ರಘುರಾಮ್ | 1,000.00 |
| ಎಸ್. ನಾಗರತ್ನ | 501.00 |
| ಜಯರಾಮ್ | 501.00 |
| ಆರ್. ಸಾವಿತ್ರಮ್ಮ | 500.00 |
| ಜ್ಯೋತಿ | 100.00 |
| ಕೆ.ಎಸ್. ಶಾಮ್ ಪ್ರಸಾದ್ | 500.00 |
| ಆರ್.ಕೆ. ನಾಗಲಕ್ಷಮ್ಮ | 250.00 |
| ಮುರಳಿ ಅನಂತರಾಮ್ | 500.00 |
| ಆರ್.ಎನ್. ಸ್ವಾಮಿನಾಥನ್ | 600.00 |
| ಆರ್.ಪಿ. ರವಿಶಂಕರ್ | 1,000.00 |
| ಎನ್. ಭವ್ಯ ಶರತ್ | 1,000.00 |
| ಶಿವರಾಮ್ ಚಂದ್ರ | 250.00 |
| ಪದ್ಮಾವತಿ ಮತ್ತು ಕುಟುಂಬ | 50.00 |
| ಕುಪ್ಪುಸ್ವಾಮಿ | 200.00 |
| ಕುಪ್ಪುಸ್ವಾಮಿ | 100.00 |
| ಉಮಾ ಜಯರಾಮ್ | 500.00 |
| ಜಿ.ಎಸ್. ವೆಂಕಟೇಶ್ | 500.00 |
| ಕೆ.ಟಿ. ನಾಗರಾಜ್ | 2,101.00 |
| ಆರ್. ಗೋಪಾಲ್ ಕೃಷ್ಣ | 1,000.00 |
| ಆರ್. ವೆಂಕಟೇಶ್ ಪ್ರಸಾದ್ | 500.00 |
| ಎಂ.ಆರ್. ರವಿಶಂಕರ್ | 1,000.00 |

| | |
|---|---|
| ವೈ.ಆರ್. ಗಣಪತಿ | 125.00 |
| ಬಿ.ಎಸ್. ಸೂರ್ಯನಾರಾಯಣ್ | 2,000.00 |
| ಸಿ.ವಿ. ಕಾಮತ್ | 1,505.00 |
| ಮಲ್ಲಿಕಾರ್ಜುನ ಆರಾಧ್ಯ | 100.00 |
| ಸತ್ಯನಾರಾಯಣ | 100.00 |
| ಶಾಮ್ ಸುಂದರ್ ಮತ್ತು ಶ್ರೀಕಾಂತ್ | 1,000.00 |
| ಜಿ.ವಿ. ಬಾಲಸುಬ್ರಮಣಿ | 500.00 |
| ಎಸ್. ರವಿಶಂಕರ್ ಕುಟುಂಬ | 2,000.00 |
| ಎಸ್. ಪದ್ಮಾವತಿ | 600.00 |
| ಜಿ.ಎಸ್. ಗೌರಮ್ಮ ಮತ್ತು ಮಕ್ಕಳು | 2,000.00 |
| ಕೆ. ಶರಾವತಿ | 1,001.00 |
| ಉಮಾ ಗೋವಿಂದ್ | 500.00 |
| ರಾಜೇಶ್ವರಿ | 250.00 |
| ಎಮ್.ಆರ್. ವಿಶ್ವೇಶ್ | 100.00 |
| ನರಸಿಂಹನ್ | 100.00 |
| ಪದ್ಮನಾಭ ಸರ್ಜಾಪುರ | 1,000.00 |
| ಪಾರ್ವತಿ ವಿಜಯಸಾರಥಿ | 1,000.00 |
| ಜಿ. ಅಶೋಕ್ ಕುಮಾರ್ | 500.00 |
| ಡಾ. ಜಿ. ಸ್ವಾಮಿನಾಥ್ | 500.00 |
| ನರಸು ರಾಮಚಂದ್ರ | 500.00 |
| ಸುಬ್ರಹ್ಮಣ್ಯ | 20.00 |
| ರಾಮಕೃಷ್ಣ | 250.00 |
| ಆರ್.ಎಸ್. ರವಿಶಂಕರ್ | 201.00 |
| ವಿನಯ್ ರಾಮಕೃಷ್ಣ | 100.00 |
| ಎ. ಮಂಜುನಾಥ್ | 600.00 |
| ಗಣೇಶ್ ಶ್ರೀಧರ್ | 500.00 |
| ಗೌತಮ್ ಆರ್. ಶಂಕರ್ | 500.00 |
| ವಿಷ್ಣು | 501.00 |
| ವಿಶ್ವನಾಥ್ | 100.00 |
| ನರೇಂದ್ರ ವಿ. | 2,000.00 |
| ಎಚ್. ವೆಂಕಟೇಶ್ | 500.00 |
| ಸಿ.ಕೆ. ಶಂಕರ್ | 1,000.00 |
| ಯಶ್ವಿನಿ | 250.00 |
| ಟಿ.ವಿ.ಎಸ್. ಶರ್ಮಾ | 200.00 |
| ಶಾಂತಾ ವೆಂಕಟೇಶ್ | 200.00 |
| ಸುಮಿತ್ರಮ್ಮ ಮತ್ತು ಕುಟುಂಬ | 1,002.00 |
| ದೀಪಿಕಾ ರಾಜೇಶ್ | 101.00 |
| ಮಿಥಾಶ್ರಿ | 51.00 |
| ಹರ್ಷ | 51.00 |
| ಚಂದ್ರಿಕಾ ಪ್ರಸಾದ್ | 501.00 |
| ಹೇಮಲತಾ ಶಾಂತರಾಜ್ | 20.00 |
| ಎಮ್ ಜಿ. ರಾಮನಾಥ್ | 50.00 |

| | |
|---|---|
| ಸುಬ್ಬಲಕ್ಷ್ಮಿ | 2,000.00 |
| ಎಂ. ಗಿರಿಜಾ ದೇವಿ | 1,500.00 |
| ಕಿರಣ್ ಪಾರ್ಥಸಾರತಿ | 1,000.00 |
| ಅಶ್ವತ್ ನಾರಾಯಣ | 500.00 |
| ಭಾಸ್ಕರ್ | 100.00 |
| ಕೆ.ವಿ. ರತ್ನಾರಾವ್ | 101.00 |
| ಎಂ. ನಾಗನಿ | 101.00 |
| ಶ್ರೀನಾಥ್ | 200.00 |
| ಪ್ರದೀಪ್ ಎಲ್. | 500.00 |
| ಅಂಜನ್ ಕುಮಾರ್ | 2,000.00 |
| ರಾಮಸ್ವಾಮಿ | 100.00 |
| ಎನ್. ಪ್ರಭಾಕರ್ | 2,000.00 |
| ಬಿ.ಸಿ. ರಾಮಮೂರ್ತಿ | 3,000.00 |
| ಬಿ.ಆರ್. ಪ್ರಭು | 1,000.00 |
| ಹೆಚ್.ಜಿ. ಅನಂತ್ | 500.00 |
| ಡಿ. ಸತ್ಯಮೂರ್ತಿ | 2,000.00 |

## ಕ್ಯಾಲೆಂಡರ್ ಪ್ರಾಯೋಜಕರು

| | |
|---|---|
| ಕೆ. ಗುಂಡಪ್ಪ | 1,000.00 |
| ಟಿ.ಎನ್. ರವಿಕಿರಣ್ | 1,000.00 |
| ಎಸ್. ಉಮೇಶ್ | 1,000.00 |
| ಬಿ.ಆರ್. ಶಂಕರ್ ಪ್ರಸಾದ್ | 1,000.00 |
| ಎಸ್.ವಿ. ಸ್ಟೇಷನರ್ಸ್ | 1,000.00 |
| ಎಸ್. ಚಂದ್ರಶೇಖರ್ | 1,000.00 |
| ಬಿ. ಶ್ರೀಧರ್ | 1,000.00 |
| ಕೆ. ಮಂಜುನಾರಾಯಣ್ | 1,000.00 |
| ಆರ್.ಎಸ್. ಪ್ರಶಾಂತ | 1,000.00 |
| ಟಿ.ಎನ್. ರಘು | 1,000.00 |
| ಎಂ.ಆರ್. ರವಿಶಂಕರ್ | 1,000.00 |
| ಬಿ. ಸುಬ್ರಹ್ಮಣ್ಯಂ | 1,000.00 |
| ಎ.ವಿ. ರಾಮಸ್ವಾಮಿ | 1,000.00 |

## ವಿದ್ಯಾನಿಧಿಗೆ ಸ್ವೀಕೃತ ದೇಣಿಗೆ

| | |
|---|---|
| ಬಿ.ಎಸ್. ಸೂರ್ಯನಾರಾಯಣ್ | 3,000.00 |
| ರಾಜಲಕ್ಷ್ಮಿ | 500.00 |

## ಧನ್ಯವಾದಗಳು

ಸಂಘದ ಮೇಲೆ ವಿಶ್ವಾಸವಿಟ್ಟು ನಮ್ಮ ಎಲ್ಲಾ ಕಾರ್ಯಕ್ರಮಗಳನ್ನು ಮೆಚ್ಚಿ, ಸಹೃದಯತೆಯಿಂದ ದೇಣಿಗೆ ನೀಡಿದ ನಿಮ್ಮೆಲ್ಲರನ್ನು ಬೃಹಚ್ಚರಣ ಸಂಘದ ಧನ್ಯವಾದಗಳು

## ಮಕ್ಕಳಿಗಾಗಿ ಲೆಕ್ಕಗಳು

1. ರಾಜು ಮತ್ತು ಸೀತ ದಂಪತಿಗಳು ರಾಜುವಿನ ವಯಸ್ಸು ತನ್ನ ಪತ್ನಿಯ ವಯಸ್ಸಿಗಿಂತ ಶೇ. ಹತ್ತರಷ್ಟು ಹೆಚ್ಚು. ರಾಜುವಿನ ಅರ್ಧ ವಯಸ್ಸು ಮತ್ತು ಸೀತಾರ ಪೂರ್ಣ ವಯಸ್ಸನ್ನು ಕೂಡಿದರೆ 93 ಬರುತ್ತದೆ. ರಾಜುವಿನ ಪೂರ್ಣ ವಯಸ್ಸು ಮತ್ತು ಸೀತಾರ ಅರ್ಧ ವಯಸ್ಸನ್ನು ಕೂಡಿದರೆ 96 ಬರುತ್ತದೆ. ಹಾಗಿದ್ದರೆ ರಾಜು ಮತ್ತು ಸೀತಾರ ವಯಸ್ಸು ಎಷ್ಟು?
2. ಒಂದು ತೊಟ್ಟಿಗೆ ಎರಡು ನಲ್ಲಿಗಳಿವೆ. ಮೊದಲನೆಯ ನಲ್ಲಿಗೆ ತೊಟ್ಟಿಯನ್ನು ತುಂಬಲು 4 ಗಂಟೆಗಳು ಬೇಕಾದರೆ ಎರಡನೆಯ ನಲ್ಲಿಗೆ 6 ಗಂಟೆಗಳು ಬೇಕು. ಎರಡೂ ನಲ್ಲಿಗಳನ್ನು ಒಟ್ಟಿಗೇ ತೆರೆದರೆ ತೊಟ್ಟಿಯು ಎಷ್ಟು ಗಂಟೆಗಳಲ್ಲಿ ತುಂಬುತ್ತದೆ?
3. ಪ್ರದ್ಯುಮ್ನ ಜಾಣ ಹುಡುಗ. ಅವನು ತನ್ನ ಪರೀಕ್ಷೆಯಲ್ಲಿ ಆರು ವಿಷಯಗಳಿಂದ ಸರಾಸರಿ 95 ಗಳಿಸಿದ್ದಾನೆ. ಅವನು ನಾಲ್ಕು ವಿಷಯಗಳಲ್ಲಿ 98, 94, 93 ಮತ್ತು 94 ಗಳಿಸಿದ್ದಾನೆ. ಉಳಿದ ಎರಡು ವಿಷಯಗಳಾದ ಕನ್ನಡ ಮತ್ತು ಗಣಿತದಲ್ಲಿ ಅವನು ಕನ್ನಡಕ್ಕಿಂತ ಗಣಿತದಲ್ಲಿ ಒಂದು ಅಂಕ ಹೆಚ್ಚು ಗಳಿಸಿದ್ದರೆ ಅವನು ಕನ್ನಡ ಮತ್ತು ಗಣಿತದಲ್ಲಿ ಎಷ್ಟು ಗಳಿಸಿದ್ದಾನೆಂದು ಕಂಡುಹಿಡಿಯಿರಿ.
4. ಶ್ರೀಕಾಂತನ ಬಳಿ ಆಯತಾಕಾರದ ಒಂದು ತೋಟವಿದೆ. ಅದರ ಉದ್ದ 200 ಅಡಿ ಇದ್ದರೆ ಅಗಲ 100 ಅಡಿ ಇದೆ. ಆ ತೋಟಕ್ಕೆ 100 ಅಡಿ ಅಗಲದ ಕಡೆಯಲ್ಲಿ ಗೋಡೆಯನ್ನು ಕಟ್ಟಲಾಗಿದೆ. ಉಳಿದ ಮೂರು ಕಡೆ ತಂತಿ ಬೇಲಿ ಹಾಕಲು ನಿರ್ಧರಿಸಲಾಗಿದೆ ಮತ್ತು ಮೂರು ಕಡೆಯಲ್ಲೂ ಪ್ರತಿ 20 ಅಡಿಗೆ ಒಂದರಂತೆ ಕಂಬವನ್ನು ನೆಡಬೇಕಾಗಿದೆ. ಹಾಗಿದ್ದರೆ ಅಲ್ಲಿ ನೆಡಬೇಕಾದ ಒಟ್ಟು ಕಂಬಗಳ ಸಂಖ್ಯೆ ಎಷ್ಟು?
6. ಯಾವುದೋ ಮೂರು ಸಂಖ್ಯೆಗಳನ್ನು ಕೂಡಿದಾಗ ಬರುವ ಮೊತ್ತ ಮತ್ತು ಅದನ್ನು ಗುಣಿಸಿದಾಗ ಬರುವ ಮೊತ್ತ ಒಂದೇ ಆಗಿದ್ದರೆ, ಆ ಮೂರು ಸಂಖ್ಯೆಗಳು ಯಾವುವು?

ನಿಮ್ಮ ಉತ್ತರಗಳು

5 ಸರಿ ಇದ್ದರೆ – ಅತ್ಯುತ್ತಮ, 3–4 ಸರಿ ಇದ್ದರೆ – ಉತ್ತಮ, 1–2 ಸರಿ ಇದ್ದರೆ – ಮಧ್ಯಮ, ಒಂದೂ ಸರಿ ಇಲ್ಲದಿದ್ದರೆ ಹೆಚ್ಚಿನ ಅಭ್ಯಾಸ ಅಗತ್ಯ

◆ **ಬಿ.ಇ. ಗೋವಿಂದ್**
**9167762988**

**ಸರಿ ಉತ್ತರಗಳು**

***1 ರಾಜು ಮತ್ತು ಸೀತಾರ ವಯಸ್ಸು ಕ್ರಮವಾಗಿ 66 ಮತ್ತು 60 *2 2. 2 ಗಂಟೆ 24 ನಿಮಿಷ *3 ಕನ್ನಡ ಮತ್ತು ಗಣಿತದಲ್ಲಿ ಕ್ರಮವಾಗಿ 95 ಮತ್ತು 96, * 4. 26 ಕಂಬಗಳು, *5. 1, 2 ಮತ್ತು 3**

### ನಮ್ಮನ್ನಗಲಿದ ನಮ್ಮವರಿಗೆ ಸಂಘದ ಶ್ರದ್ಧಾಂಜಲಿ

- **02–01–2019, ಕೆ. ಪದ್ಮಾವತಿ (82)**, ಸಂಘದ ಪೋಷಕ ಕೆ.ಸಿ. ಶೇಖರ್‌ರವರ ಸಹೋದರಿ.
- **15–01–2019, ನಾಗಭೂಷಣ್ ಶಾಸ್ತ್ರಿ (76)**, ರಾಧಾ ಗುಮ್ಮಳಾಪುರರವರ ಪತಿ ಹಾಗೂ ಸದಸ್ಯ ವೆಂಕಟರವರ ತಂದೆ.
- **15–01–2019, ಶಶಿಭೂಷಣ್**, ತ್ರಿಯಂಬಕರವರ ಪುತ್ರ.
- **16–01–2019, ಎಸ್.ಆರ್. ವೆಂಕಟಸುಬ್ಬಯ್ಯ (87)** ಸಂಘದ ಅಧ್ಯಕ್ಷ, ಎಸ್. ಸೋಮಸುಂದರರವರ ಚಿಕ್ಕಪ್ಪ.
- **30–01–2019,** ಸುಗುಣ ಸಂಗಮೇಶ್ವರ್
- **31–01–2019,** ಕಾಮಾಕ್ಷಿ ಲಕ್ಷ್ಮಿನಾರಾಯಣ್
- **10–02–2019, ಅನಂತಕೃಷ್ಣ (94)**, ಸಂಘದ ಸದಸ್ಯರಾದ ಎಸ್.ಎ. ಮಂಜುನಾಥ್ ಹಾಗೂ ಎಸ್.ಎ. ಸತ್ಯಮೂರ್ತಿಯವರ ತಂದೆ.
- **18–02–2019, ರಾಧಾ,** ಸರ್ಜಾಪುರ ಶ್ರೀನಿವಾಸ್‌ರವರ ಪತ್ನಿ ಹಾಗೂ ಸಂಘದ ಸದಸ್ಯ ನಿತಿನ್ ಭಾಸ್ಕರ್‌ರವರ ಸೋದರತ್ತೆ.
- **21–02–2019, ಬಿ.ಎಸ್. ಕೃಷ್ಣಮೂರ್ತಿ (70)** ದಿ. ದಿಣ್ಣೆ ಬಿ.ಕೆ. ಸೂರ್ಯನಾರಾಯಣ್‌ರವರ ಪುತ್ರ.
- **22–02–2019, ಶ್ರೀನಿವಾಸಮೂರ್ತಿ (85)** ಖಜಾಂಚಿ ಸತ್ಯನಾರಾಯಣ್‌ರವರ ಸೋದರ ಸಂಬಂಧಿ.
- **09–03–2019, ಲೀಲಾ ನಾರಾಯಣ ಮೂರ್ತಿ,** ಸದಸ್ಯ ಶ್ರೀ ಕೆ.ಜಿ. ವೆಂಕಟೇಶರವರ ಬಂಧು.

***ಬೃಹಚ್ಚರಣ ಸಂಘವು ಅಗಲಿದವರನ್ನು ಸ್ಮರಿಸಿ. ಮೃತರ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಕೋರುತ್ತದೆ.***

# W-A-T-C-H

ಶ್ರೀ ಸಾಯಿಬಾಬಾ ಅವರ ದಿವ್ಯೋಪದೇಶಗಳು ಕಿವಿಗೂ ಬುದ್ಧಿಗೂ ಚಿತ್ತಕ್ಕೂ ಸಮೃದ್ಧವಾದ ಆನಂದವನ್ನು ಕೊಡುವ ರಸದೌತಣ. ಅವರು ಹೇಳುವುದೆಲ್ಲ ಪರಕ್ಕೆ ಅಧೀನವಾಗಿ ಇಹದಲ್ಲಿ ಬದುಕುವುದು ಹೇಗೆ, ಬದುಕುವುದು ಏಕೆ ಎಂಬುದನ್ನು ಕುರಿತು.

ಈ ಸಂದರ್ಭದಲ್ಲಿ 'ಶ್ರೋತೃಣಾಂ ಗ್ರಹಣಾರ್ಥ ಮನ್ಯಮನಸಾಂ (ಬೇರೆ ವಿಷಯಗಳಲ್ಲಿ ಮನಸ್ಸನ್ನುಳ್ಳ ಶ್ರೋತೃಗಳನ್ನು ಹಿಡಿದುಕೊಳ್ಳುವುದಕ್ಕೋಸ್ಕರ) ಈ ಸ್ವಾಮಿ ತಮ್ಮ ಮಾತಿನ ಮಧ್ಯೆ ಅನೇಕ ಉಪಮಾನಗಳನ್ನು ಕೊಡುತ್ತಾರೆ. ದೃಷ್ಟಾಂತ ಕತೆಗಳನ್ನು ಹೇಳುತ್ತಾರೆ. ಮಹಾಕಾವ್ಯಗಳನ್ನು ಸಂದರ್ಭೋಚಿತವಾಗಿ ತಂದು ಜೋಡಿಸುತ್ತಾರೆ. ಹೀಗೆ ಬೆಳೆದುಬರುವ ಅರ್ಥ ವೈಭವದ ಜೊತೆಗೆ ಅವರು ಮಧ್ಯೇ ಮಧ್ಯೇ ಮಿಂಚಿಸುವ ಶಬ್ದಾಲಂಕಾರಗಳ ವೈಭವವೂ ಕೇಳುವವರಿಗೆ ತುಂಬಾ ಪ್ರಿಯವಾಗುತ್ತವೆ. ಅವುಗಳನ್ನು ಒಮ್ಮೆ ಕೇಳಿದವರು ಸುಲಭವಾಗಿ ಮರೆಯಲಾರರು.

ಕೆಲವು ಉದಾಹರಣೆ ನೋಡಿ : Properties are not properties; God is nowhere ಅನ್ನೋದು ಸರಿಯಲ್ಲ. God is now here ಅನ್ನೋದು ಸರಿ; ಕೆಳಗೆ ರೂಟು ಮೇಲೆ ಫ್ರುಟು ಇಲ್ಲದ ಮರ ಬರೀ ಫೈರ್‌ವುಡ್ಡು; ಬ್ಲಡ್ಡು ದುಡ್ಡು ಎರಡೂ ಸರ್ಕುಲೇಟ್ ಆಗುತ್ತಿರಬೇಕು. ಮನುಷ್ಯ Diamond ಅನ್ನ ಅಲ್ಲ ಪಡೆಯಬೇಕಾದ್ದು, Die-mind ಅನ್ನ; ವಿದ್ಯಾರ್ಥಿಗಳು ಬಯಸಬೇಕಾದ್ದು ಬಹುಮತಿಯನ್ನಲ್ಲ ಏಕಮತಿಯನ್ನ. ಇತ್ಯಾದಿ ಸಾವಿರಾರು ಉಂಟು. ಒಂದೊಂದಕ್ಕೂ ವಿಪುಲವಾಗಿ ವ್ಯಾಖ್ಯಾನ ಮಾಡಲು ಅವಕಾಶ ಉಂಟು. ಒಮ್ಮೆ ಅವರ ಕಾಲೇಜಿನ ಕೆಲವು ವಿದ್ಯಾರ್ಥಿಗಳಿಗೆ ಕೈಗಡಿಯಾರಗಳನ್ನು ಪಾರಿತೋಷಕವಾಗಿ ಕೊಡುತ್ತಾ ಸ್ವಾಮಿ ಹೇಳಿದರು: "ಈ ವಾಚು ನಿಜವಾದ ವಾಚಲ್ಲ. ನೀವು ವಾಚ್ ಮಾಡಬೇಕಾದ್ದು ಬೇರೆ ಇದೆ.

`Watch your word; watch your Action'; Watch your thought; watch your character and watch your heart!'

ನಾವು ಸದಾ ಕಾಲವೂ ಆ ಪ್ರಮತ್ತವಾಗಿ ವಾಚ್ ಮಾಡುತ್ತಿರಬೇಕಾದ್ದು ನಮ್ಮ ಮನಸ್ಸಿನ, ನಮ್ಮ ಮಾತಿನ ನಮ್ಮ ಮೈಯಿನ ಕೆಲಸ ಕಾರ್ಯಗಳನ್ನು ನಾವಾಡುವ ಮಾತು ಸುಂದರವಾಗಿರಬೇಕು. ಮತ್ತೊಬ್ಬರಿಗೆ ಕೇಳಲು ಹಿತವಾಗಿರ ಬೇಕು. ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು. ನಾವು ನಮ್ಮ ನಡವಳಿಕೆಗಳ ಬಗ್ಗೆ ಎಚ್ಚರವಾಗಿರ ಬೇಕು. ಒಳ್ಳೆಯ ಆಲೋಚನೆಗಳನ್ನು ಮಾಡಬೇಕು. ಬೇರೆಯವರಿಗೆ ಕೆಟ್ಟದ್ದನ್ನು ಬಗೆಯಬಾರದು. ತ್ರಿಕರಣ ಶುದ್ಧಿಯ ಮೇಲೆ ನಮ್ಮ ಶೀಲ ಅಥವಾ ಗುಣಶೀಲ ಅವಲಂಬಿಸಿದೆ. ಕೊನೆಯದಾಗಿ ನಮ್ಮ ಹೃದಯಕ್ಕೆ ಅಥವಾ ಆತ್ಮಕ್ಕೆ ತಪ್ಪು–ಒಪ್ಪುಗಳನ್ನು ಆತ್ಮಾವಲೋಕನ ಮಾಡಬೇಕು. ನಾವು ಸದಾ ವಾಚ್ ಮಾಡಬೇಕಾಗಿರುವುದು ಒಳ್ಳೆಯ ಮಾತಿಗೆ ನಡವಳಿಕೆಗೆ ಒಳ್ಳೆಯ ಆಲೋಚನೆಗಳಿಗೆ ಗುಣಶೀಲಕ್ಕೆ ಮತ್ತು ಆತ್ಮಾವಲೋಕನಕ್ಕೆ. ಇದು ಸತ್ಯಸಾಯಿಬಾಬಾರವರ ಉವಾಚ.



◆ ಕಿತ್ತಗಾನಹಳ್ಳಿ ಶ್ರೀನಿವಾಸಯ್ಯ

## ಅಂಚೆಪೆಟ್ಟಿಗೆ ಪತ್ರಗಳು



ಕಿತ್ತಗಾನಹಳ್ಳಿಯ ಶ್ರೀ ವಳ್ಳಿ–ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯ ಸ್ವಾಮಿ ನಾಗಾರಾಧನೆ ಅತ್ಯಂತ ವಿಜೃಂಭಣೆಯಿಂದ ನಡೆಸಲಾಗುತ್ತಿದೆ. ಶ್ರೀ ಮಹಾಗಣಪತಿ, ಶ್ರೀ ಗಾಯತ್ರಿದೇವಿ, ಭೂ–ನೀಳಾ ಸಮೇತ ಶ್ರೀ ಶ್ರೀನಿವಾಸ ಕುಲದೇವ ಸನ್ನಿದಾನವು, ನವಗ್ರಹಾದಿ ಪರಿವಾರ ದೇವತೆಗಳ ಸಾನ್ನಿಧ್ಯವು ಇಲ್ಲಿದೆ.

ಇಂತಹ ಕ್ಷೇತ್ರ ದರ್ಶನ ನಮ್ಮ ಸಮುದಾಯದ ಪುಣ್ಯವಿಶೇಷ. ನಮ್ಮ ಪಂಗಡದವರು ಅನ್ನದಾನ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳನ್ನು ನಡೆಸಿ ಜನ್ಮದ ಕರ್ಮ ಕಳೆದುಕೊಂಡು ಧನ್ಯರಾಗುತ್ತಿದ್ದಾರೆ. ಇದು ನಮ್ಮ ಹೆಮ್ಮೆಯ ನಾಗೇಶ್ವರ ಕ್ಷೇತ್ರ.

ಇದನ್ನು ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘವು ಅತ್ಯಂತ ದಕ್ಷತೆಯಿಂದ ಸೇವಾ ಮನೋಭಾವದಿಂದ ವ್ಯವಸ್ಥಿತವಾಗಿ ನಡೆಸುತ್ತಿದ್ದಾರೆ. ಸಂಘದ ಕಾರ್ಯಕಾರಿ ಸಮಿತಿಯವರಿಗೆ ಅಭಿನಂದನೆಗಳು.

**ರಾಜಾಪುರ ಗೋಪಿನಾಥ**



# ಮಂಕುತಿಮ್ಮನ ಕಗ್ಗ – ತಾತ್ಪರ್ಯ

**ವಹಿಸು ಕೆಲಭಾರಗಳ; ಸಹಿಸು ಕೆಲ ನೋವುಗಳ ಪ್ರಹರಿಸದಿಗಳನನಿತು ಯುಕ್ತಗಳನರಿತು**
**ಮಹಿಯ ನಾಟಕದಿ ನೀಂ ಮನಸಿಟ್ಟು ಕುಣಿಕುಣಿದು ವಿಹರಿಸಾತ್ಮಾಲಯದಿ ಮಂಕುತಿಮ್ಮ !!**

ಓ, ಮಾನವಾ ನಿನ್ನ ಬದುಕಿನಲ್ಲಿ ಬರುವ ಎಲ್ಲಾ ಜವಾಬ್ದಾರಿಗಳನ್ನು ಇದೊಂದು ಹೊರೆ ಎನ್ನದೆ ನಿರ್ವಂಚನೆಯಿಂದ ಧರಿಸು. ಜೀವನವೆಂದರೆ ಸರಸ–ವಿರಸಗಳ ಸಮ್ಮಿಲನ. ಹೇಗೆ ನಲಿವು ಬಂದಾಗ, ಆನಂದದಿಂದ ಆ ಸುಖವನ್ನು ಅನುಭವಿಸುವೆಯೋ, ಅಂತೆಯೇ ಕಷ್ಟ ಬಂದಾಗ ಮಾನಸಿಕ ಕ್ಷೋಭೆಗೊಳಗಾಗದೆ ಸಹಿಸು. ಅಂತರಂಗದ ಮತ್ತು ಬಹಿರಂಗದ ಶತೃಗಳವೆಲ್ಲವನ್ನೂ ಹೋರಾಡಿ ಜಯಗಳಿಸು. ಕೆಲವರು ಶತೃಗಳನ್ನರಿತು ಯುಕ್ತಿಯಿಂದ ಗೆಲ್ಲಬೇಕಾಗುತ್ತದೆ. ನಂತರ ಸೂತ್ರಧಾರನಾದ ಆ ಭಗವಂತ ಜಗತ್ತಿನಲ್ಲಿ ನಮಗೆ ಯಾವ ಪಾತ್ರ ಕೊಟ್ಟಿರುತ್ತಾನೋ, ಆ ಪಾತ್ರಗಳ ಒಳಹೊಕ್ಕು ಅಭಿನಯಿಸು. ಇಷ್ಟೆಲ್ಲಾ ಬಹಿರಂಗದ ಕೈಂಕರ್ಯ ಮಾಡಿದರೂ ಅಂತರಂಗದಲ್ಲಿ ಇರುವ ಆ ಭಗವಂತನನ್ನು ಆರಾಧಿಸಿ ಅವನೊಡನೆ ವಿಹರಿಸು.

ಚತುರಾಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಶ್ರೇಷ್ಠ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಗೃಹಸ್ಥಾಶ್ರಮದಲ್ಲಿರುವವರಿಗೆ ಇರುವಂತ ಜವಾಬುದಾರಿ–ಕೈಂಕರ್ಯ–ಸೇವೆ ಮುಂತಾದುವು ಮಿಕ್ಕ ಮೂರೂ ಆಶ್ರಮಗಳಲ್ಲಿಲ್ಲ. ಬ್ರಹ್ಮಚಾರಿ ಆದವನಿಗೆ ಕೇವಲ ವೇದಾಧ್ಯಯನ, ದೇವತಾರಾಧನೆ, ಕಿರಿಯರಿಗೆ ಪಾಠ ಹೇಳುವುದು, ಸನ್ಯಾಸಾಶ್ರಮದವರಿಗೆ ಎಲ್ಲವನ್ನೂ ತ್ಯಜಿಸಿ ತಪಸ್ಸು ಮಾಡುವುದು, ವಾನಪ್ರಸ್ಥಾಶ್ರಮದವರಿಗೆ ಕಾಡಲ್ಲಿ ಇದ್ದು ಜಪ–ತಪ–ಧ್ಯಾನ ಇಂತಹುವುದೇ ದೈನಂದಿನ ಚಟುವಟಿಕೆ. ಅವರಿಗೆ ಯಾವ ಹೊರೆಯೂ ಇಲ್ಲ. ಗೃಹಸ್ಥಾಶ್ರಮದಲ್ಲಿರುವವರಿಗೆ ಮನೆಯಲ್ಲಿರುವ ಹೆತ್ತವರು, ಹೆಂಡತಿ, ಮಕ್ಕಳು, ಅತಿಥಿಗಳು, ಗೆಳೆಯರು ಎಲ್ಲರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು. ಅದರಿಂದಲೇ ಗೃಹಸ್ಥಾಶ್ರಮ ಶ್ರೇಷ್ಠ ಎನ್ನುತ್ತಾರೆ. ಸಂಸಾರದಲ್ಲಿ ಗಂಡಿಗೆ ಜವಾಬ್ದಾರಿಗಳಿರುವಂತೆ, ಹೆಣ್ಣೂ ಸಂಸಾರದ ಅನೇಕ ಭಾರಗಳನ್ನು ಹೊರಬೇಕಾಗುತ್ತದೆ. ಆಯಾ ವಯೋಮಾನಕ್ಕೆ ತಕ್ಕಂತೆ ಜವಾಬುದಾರಿಗಳು ಇರುತ್ತವೆ. ಇದಕ್ಕೆ ಹೆದರಿ ಹಿಂಜರಿದು ಮನೆ ಮಠ ಬಿಟ್ಟು ದೂರ ಹೋಗಿ ಸನ್ಯಾಸತ್ವ ತೆಗೆದುಕೊಂಡವರೂ ಉಂಟು. ಆದರೆ ಜೀವನದಲ್ಲಿ ಯಾವುದೇ ರೀತಿಯ ಭಾರಗಳು ಎದುರಾದರೂ, ಅದು ಅನಿವಾರ್ಯ. ಆದ್ದರಿಂದ ಸಂಸಾರ ಭಾರವನ್ನು ವಹಿಸಿಕೋ. ನಿನ್ನ ಕರ್ತವ್ಯವನ್ನು ನಿಷ್ಠೆಯಿಂದ ಮಾಡು. ಹಿಂಜರಿಯಬೇಡ. ನೋವು ನಲಿವುಗಳು ಬಂದಾಗಲೂ ಸಮತೆಯಿಂದ ಕಾಣು. ಸರಸವೇ ಜನನ – ವಿರಸವೇ ಮರಣ. ಸಮರಸವೇ ಜೀವನ ಎನ್ನುವಂತೆ ಕಷ್ಟಗಳು ಬಂದಾಗ ಸಹನೆಯಿಂದ ಇರುವುದನ್ನು ಕಲಿ. ಕಷ್ಟಗಳನ್ನು ಅನುಭವಿಸಿ ನಿಭಾಯಿಸು. ಹೊರಗೆ ಬರುವಾಗ ಸಿಗುವ ಅನುಭವದ ಸಂತೃಪ್ತಿಯೇ ನಿಜವಾದ ಆನಂದ. "ಕಷ್ಟಗಳ ಕೊಡಬೇಡ ಎನಲಾರೆ ರಾಮಾ, ಕಷ್ಟ ಸಹಿಸುವ ಸಹನೆ ಕೊಡು ಎನಗೆ ಇನ್ನಷ್ಟು ನಿನ್ನಷ್ಟು ರಾಮಾ" ಎಂದು ಭಕ್ತರೊಬ್ಬರು ಹೇಳಿದ್ದಾರೆ.

ನಮ್ಮ ಜೀವನದಲ್ಲಿ ಮಿತ್ರರು ಮತ್ತು ಶತೃಗಳು ಇದ್ದೇ ಇರುತ್ತಾರೆ. ಶತೃಗಳನ್ನು ಧೈರ್ಯದಿಂದ ಗೆಲ್ಲಬೇಕು. ಕೆಲವರನ್ನು ವಿನಯದಿಂದ ತಿಳಿಹೇಳಿ ಅವರಿಗೆ ಅರಿವು ಬರುವಂತೆ ಮಾಡಿ ನಿವಾರಿಸಬಹುದು. ಇದೆಲ್ಲಾ ಬಹಿರಂಗದ ಶತೃಗಳು. ಆದರೆ ಅಂತರಂಗದ ಶತೃಗಳನ್ನು ಗೆಲ್ಲಲು ಬಹಳ ಕಷ್ಟ. ದಮನ ಮಾಡಿದಷ್ಟೂ ಮೇಲೇರಿ ಬರುತ್ತದೆ. ಅದಕ್ಕೆ ಬಹಳ ಸಾಧನೆ ಬೇಕು. ಮಕ್ಕಳನ್ನು ಹೇಗೆ ಲಾಲಿಸಿ ಒಳ್ಳೆಯ ಮಾತು ಹೇಳಿ ತಿಳುವಳಿಕೆ ಮೂಡಿಸುತ್ತೇವೆಯೋ, ಅಂತೆಯೇ ಮನದ ಅರಿಗಳನ್ನು ಯುಕ್ತಿಗಳಿಂದ ಹೊರಹಾಕಬೇಕು. ಮಗು ಹಟಹಿಡಿದಾಗ, ನಾವು ನಯವಾಗಿ ಇಷ್ಟಿಷ್ಟೇ ಮೆಲುಮಾತಿನಿಂದ ಒಳ್ಳೆಯ ಕಥೆಗಳನ್ನು ಹೇಳಿ ಸರಿದಾರಿಗೆ ತರುತ್ತೇವೆಯೋ, ಹಾಗೆಯೇ ಅಂತರಂಗದ ಶತೃಗಳನ್ನು ನಯವಾಗಿ ದಂಡಿಸಿ ನಮ್ಮ ಅಧೀನದಲ್ಲಿಡಬೇಕು. ಅದಕ್ಕೆ ತಕ್ಕ ತಂತ್ರೋಪಾಯಗಳನ್ನು ರೂಪಿಸಬೇಕು. ಅಂತಹ ತಂತ್ರಗಳ ಬಗ್ಗೆ ತಿಳಿದಿರಬೇಕು.

ಭಗವಂತನು ಸೂತ್ರಧಾರಿ. ನಾವೆಲ್ಲರೂ ಜಗತ್ತಿನ ಪಾತ್ರಧಾರಿಗಳು. ನಮಗೆ ಯಾವ ವೇಷ–ಭೂಷಣ, ವ್ಯಕ್ತಿತ್ವ, ಗುಣಗಳನ್ನು ಕೊಡುತ್ತಾನೆಯೋ, ಅದರಂತೆಯೇ "ಪಾಲಿಗೆ ಬಂದದ್ದು ಪಂಚಾಮೃತ" ಎನ್ನುವಂತೆ ಅಭಿನಯಿಸಿ ಆ ಪಾತ್ರದ ನಿರ್ವಹಣೆಯನ್ನು ಚೆನ್ನಾಗಿ ಮಾಡಬೇಕು. ಶಹಬ್ಬಾಸ್ ಗಿರಿಯನ್ನು ದಕ್ಕಿಸಿಕೊಳ್ಳಬೇಕು. ಜಗತ್ತೆಂಬ ರಂಗಮಂಟಪದಲ್ಲಿ ಯಾವ ರೀತಿಯಲ್ಲಿ ಅಭಿನಯಿಸಬೇಕೆಂದರೆ, ನಮ್ಮ ಪಾತ್ರ ಮಾಡಿದ ನಂತರವೂ ಚಪ್ಪಾಳೆ ತಟ್ಟುತ್ತಿರಬೇಕು. ಇಷ್ಟೆಲ್ಲಾ ವ್ಯವಹಾರಗಳ ಮಧ್ಯೆಯೂ ನಮ್ಮ ಹೃದಯವೆಂಬ ಗುಡಿಯಲ್ಲಿ ನೆಲೆಸಿರುವ ಪರಮಾತ್ಮನ ಜೊತೆಯಲ್ಲಿ ವಿಹರಿಸಬೇಕು.

ಬಹಿರಂಗದಲ್ಲಿ ನಲಿಯುತ್ತಿರುವ ಮನಸ್ಸನ್ನು ಅಂತರಂಗಕ್ಕೆ ತರಬೇಕಾದರೆ ಸಾಧನೆ ಬಹು ಮುಖ್ಯ. ಇದು ಕಷ್ಟಕರವೂ ಹೌದು. ಏಕೆಂದರೆ ಮನುಷ್ಯನ ಬುದ್ಧಿ ನಾಯಿಯ ಬುದ್ಧಿಯಂತೆ. ತಿಪ್ಪೆಯ ಮೇಲೆ ಮಲಗಿರುವ ನಾಯಿ, ಇದ್ದಕ್ಕಿದ್ದಂತೆ ಪೂರ್ವಕರ್ಮದ ಫಲದಂತೆ ಏನೋ ವಾಸನೆಯನ್ನು ಹಿಡಿದು ಅದರ ಬೆನ್ನತ್ತಿ ಬಹುದೂರ ಹೋಗುತ್ತದೆ. ಅಂತೆಯೇ ಮನುಷ್ಯನ ಮನವೂ ಸಹ ತಾಳ್ಮೆಯಿಲ್ಲದೆ ಗುರಿಯಿಲ್ಲದೆ ಅತ್ತಲಿಂದಿತ್ತ ಇತ್ತಲಿಂದತ್ತ ಓಡಾಡುತ್ತಿರುತ್ತದೆ. ಇಂತಹ ಮನಸ್ಸಿಗೆ ತಕ್ಕ ಸಾಕ್ಷಾತ್ಕಾರ ಹೇಗೆ ಸಿಗುತ್ತದೆ? ಇದಕ್ಕೆ ಎಷ್ಟು ಸಾಧನೆ ಮಾಡಬೇಕು? "ಎಷ್ಟು ಚಿಕ್ಕದು ಎನ್ನ ಹೃದಯ ಏನು ಹೊಲಸದು. ಇಲ್ಲೂ (ಈ ಹೃದಯದಲ್ಲೂ) ನೆಲೆಯ ಬೇಡುವವನ ದೈನ್ಯ ಎಂತದು" ಎಂದು ಪ್ರಖ್ಯಾತ ಕವಿಯೊಬ್ಬರು ಹೇಳಿದ್ದಾರೆ. ಮನದ ಕೊಳೆಯನ್ನು ಮೊದಲು ಸ್ವಚ್ಛ ಮಾಡಬೇಕು. ದಿನದಿನದಿ ಮಾಡುವ ಪಾಪ ಪುಣ್ಯ ಕರ್ಮಗಳ ವೆಚ್ಚವನ್ನು ಅನುದಿನವೂ ಶೋಧಿಸಬೇಕು ಎಂದು ದಾಸರು ಹೇಳಿದ್ದಾರೆ. ದುರ್ಗುಣಗಳನ್ನೆಲ್ಲಾ ಹೊರಗಟ್ಟಿ ಮನಸ್ಸನ್ನು ಶುದ್ಧಿಗೊಳಿಸಬೇಕು. ದಿನವೂ ಭಗವಂತನ ಮುಂದೆ ಹೇಳುವ ಸ್ತೋತ್ರ ಅಥವಾ ಮಂತ್ರ ಮುಂದುವರೆದಂತೆ ಜಪವಾಗುತ್ತದೆ. ಹಾಗೆಯೇ ತಪವಾಗುತ್ತದೆ.

ಇದು ಬುದ್ಧಿಯ ಚಮತ್ಕಾರದಿಂದ ಆಗುವ ಕೆಲಸವಲ್ಲ. ನಾವಿರುವ ಜಗತ್ತಿನ ಕಾರ್ಯದಲ್ಲಿ ಭಾಗಿಯಾಗಿ ಸಹಮತದಿಂದ ಎಲ್ಲರೊಡನೆ

ಕೂಡಿ, ಸತ್ಕಾರ್ಯಗಳನ್ನು ಮಾಡಿ ಜೀವನದ ಕಷ್ಟ ಕಾರ್ಪಣ್ಯಗಳೊಂದಿಗೆ ಹೆಣಗಾಡಿ ಸಹಿಸಿದಾಗ ಜೀವ ಪರಿಪಕ್ವವಾಗುತ್ತದೆ. ಆಗ ಮನಸ್ಸಿನ ಶುದ್ಧತೆ ತಾನೇತಾನಾಗಿ ಬರುತ್ತದೆ. ಇದರಿಂದ ತತ್ವಜ್ಞಾನ ಎಂಬುವ ಆನಂದ ಸಿಗುತ್ತದೆ.

"ಚಿತ್ತಶುದ್ಧಿಯನ್ನು ಪಡೆಯುವುದಕ್ಕೆ ಮುನಿಯಂತೆ ಜೀವಿಸಬೇಕು" ಎಂದು ಡಿ.ವಿ. ಗುಂಡಪ್ಪನವರು ಹೇಳಿದ್ದಾರೆ. ತಾಪಸಿಯಾದವನು ರೋಗ ರುಜಿನಗಳು ಬಂದಾಗ ವೈದ್ಯರು ಹೇಳಿದಂತೆ ಪಥ್ಯದ ಆಹಾರ ತೆಗೆದುಕೊಳ್ಳಬೇಕು. ಬಾಯಿಚಪಲಕ್ಕೆಂದು ಬೇರೆ ಯಾವುದೂ ತಿನ್ನಬಾರದು. ರೋಗ ನಿವಾರಣೆಗೋಸ್ಕರವೇ ಹೊರತು ನಾಲಿಗೆಯ ಚಪಲಕ್ಕಲ್ಲವೆಂದು ತಿಳಿದು ಅದರಂತೆ ಆಹಾರ ಸೇವಿಸಬೇಕು. ಅಂತೆಯೇ ಈ ಜಗತ್ತಿನಲ್ಲಿ ಏನೇ ನಡೆಯಲಿ, ಅದು ಈಶ್ವರನ ಸಂಕಲ್ಪವೇ ಹೊರತು ನನ್ನದಲ್ಲ ಎಂಬ ಅರಿವು ಮೂಡಬೇಕು. ತ್ರಿಗುಣಗಳ ಕಾರಣದಿಂದ ಲೋಕವೆಲ್ಲವೂ ವಿಭಿನ್ನವಾಗಿ ಕಾಣುತ್ತದೆ. ಇದು ನನಗೆ ಬೇಕು. ಇದು ನನ್ನ ಸಂತೋಷ ಎಂಬ ಆಸೆಯಿಂದ ನೋಡದೆ ವಿಶ್ವ ಸಮರಸದ ಭಾವನೆಯಿಂದ ಕಾಣುವುದೆಲ್ಲವೂ ಆ ಬ್ರಹ್ಮನೇ . . ಆ ಬ್ರಹ್ಮವಸ್ತುವೇ ಎಂದು ತಿಳಿಯಬೇಕು.

ಒಟ್ಟಿನಲ್ಲಿ ತನ್ನಿಚ್ಛೆಯಂತೆ ತಿನ್ನದೆ ಯಾವುದು ದೊರಕುತ್ತದೆಯೋ ಅದನ್ನು ಸ್ವೀಕರಿಸಿ ವಾತಾವರಣಕ್ಕೆ ಮನಸ್ಸನ್ನು ಹೊಂದಿಸಿ, ತ್ರಿಗುಣಗಳಿಂದ ಯಾವುದೇ ವಿಚಾರ ವಿಷಯಗಳಿಗೂ ತಲೆಹಾಕದೆ ಮಮಕಾರವನ್ನು ನೀಗಿಸಿ ವಿಶ್ವಸಮರಕ್ಕೆ ಒಳಪಡುವವನೇ ನಿಜವಾದ ಮುನಿ. ಇಂತಹ ಸೂತ್ರವನ್ನು ವ್ರತದಂತೆ ಆಚರಿಸು ಎನ್ನುತ್ತಾರೆ ಡಿ ವಿ ಗುಂಡಪ್ಪ.

ಉಪನಿಷತ್ತು ಈ ಮುನಿಚರ್ಯೆಗೆ ಒಂದು ಉಪದೇಶ ಮಾಡಿದೆ. "ತೇನ ತ್ಯಕ್ತೇನ ಭುಂಜೀಥಾಃ" "ತ್ಯಜಿಸಿ ಭುಜಿಸಲ್ಕೆಕಲಿ" ಎಂದು ತಿಮ್ಮಗುರು ಹೇಳುತ್ತಾರೆ. ಈ ಉಪದೇಶವನ್ನು ಕಲಿತು ಅದರಂತೆ ನಡೆಯುವವನೇ ಯಜಮಾನ. ಈ ಜಗತ್ತಿಗೆ ಯಜಮಾನನಾರು? ಜೀವನದಲ್ಲಿ ಬರುವ ಎಲ್ಲಾ ದ್ವಂದ್ವಗಳನ್ನು ಫಲಾಪೇಕ್ಷೆಯಿಲ್ಲದೆ ಎದುರಿಸಿ ಶಾಂತಚಿತ್ತನಾಗಿ ಸಮಾಧಾನದಿಂದಿರುವವನೇ ಜಗಕೆ ಯಜಮಾನ. ಡಿ.ವಿ. ಗುಂಡಪ್ಪನವರು ಈ ಕುರಿತು ಒಬ್ಬ ತಾಯಿಯ (ಗೃಹಿಣಿಯ) ಉದಾಹರಣೆಯನ್ನು ಕೊಡುತ್ತಾರೆ. ತಾಯಿಯಾದವಳು ತನ್ನ ಮನೆಯವರಿಗೆ ಇಷ್ಟವಾದ ಅಡುಗೆ ಮಾಡಿ ಪ್ರೀತಿಯಿಂದ ಊಣಲು ಬಡಿಸುತ್ತಾಳೆ. ಅವರು ತಿಂದದ್ದೇ ಅವಳಿಗೆ ಆನಂದ. ತನ್ನ ಹೊಟ್ಟೆಯ ಚಿಂತೆ ಅವಳಿಗಿರುವುದಿಲ್ಲ. ಗಂಡ, ಮಕ್ಕಳು ತಿಂದ ತಕ್ಷಣ ಅಡುಗೆ ಚೆನ್ನಾಗಿದೆ ಎಂದು ಮೆಚ್ಚಿದರೆ ಅದೇ ಅವಳ ಊಟಕ್ಕೆ ತುಪ್ಪ ಇದ್ದಂತೆ. ಅದೇ ಅವಳಿಗೆ ತೃಪ್ತಿ. ನೀನು ಚಿತ್ತಶುದ್ಧಿಗೆ ಈ ವ್ರತವನ್ನು ಮಾಡು. ಇತರರಿಗೂ ಕೊಟ್ಟು ತಿನ್ನುವುದನ್ನು ಕಲಿ ಎಂದು ಹೇಳುತ್ತಾರೆ ಡಿ. ವಿ. ಗುಂಡಪ್ಪ.

◆ **ಜಿ.ಪಿ. ಲಕ್ಷ್ಮೀದೇವಿ**
**23444798**

### ಶುಭವಿವಾಹ

* ಸಂಘದ ಪೋಷಕ ಸದಸ್ಯರಾದ ಶ್ರೀ ಕೆ.ಆರ್. ನಾರಾಯಣ ಹಾಗೂ ಶ್ರೀಮತಿ ಮಂಜುಳಾರವರ ಪುತ್ರಿ ಚಿ॥ ಸೌ॥ ವಿದ್ಯಾಶ್ರೀಯವರ ವಿವಾಹವು ಚಿ॥ ಅನಿಲ್ ಕುಮಾರ್‌ರವರೊಂದಿಗೆ ದಿನಾಂಕ 15-02-2019 ರಂದು ಸತ್ಯಪ್ರಮೋದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

* ಸಂಘದ ಪೋಷಕ ಸದಸ್ಯ ಶ್ರೀ ಎಸ್. ಶ್ರೀನಿವಾಸನ್ ರವರ ಮೊಮ್ಮಗ ಹಾಗೂ ಶ್ರೀಮತಿ ಪದ್ಮಜಾರವರ ಪುತ್ರ ಚಿ॥ ಕಿರಣ್‌ರವರ ವಿವಾಹವು ದಿನಾಂಕ 21-02-2019 ರಂದು ಬೆಂಗಳೂರಿನಲ್ಲಿ ನಡೆಯಿತು.

**ಸಂಘವು ನೂತನ ವಧು-ವರರಿಗೆ ಶುಭ ಹಾರೈಸುತ್ತದೆ.**

### ಗೃಹಪ್ರವೇಶ

ಸಂಘದ ಸದಸ್ಯ ಶ್ರೀ ಆರ್.ಎಸ್. ರಮೇಶ್ ಹಾಗೂ ರೇಖಾ ರಮೇಶ್‌ರವರು ದಿನಾಂಕ: 25-03-2019 ರಂದು ತಮ್ಮ ನೂತನ ಗೃಹ 'ಆರೋಹ'ವನ್ನು ಪ್ರವೇಶಿಸಿದರು.

**ಸಂಘವು ಶ್ರೀ ರಮೇಶ್ ದಂಪತಿಗಳಿಗೆ ಶುಭ ಹಾರೈಸುತ್ತದೆ.**

### ನಾಮಕರಣ

* ಸಂಘದ ಪೋಷಕ ಸದಸ್ಯ ಹಾಗೂ ಖಜಾಂಚಿ ಶ್ರೀ ಸತ್ಯನಾರಾಯಣ (ಸತೀಶ್) ಅವರ ಮೊಮ್ಮಗ ಹಾಗೂ ಸದಸ್ಯೆ ಶ್ರೀಮತಿ ಮಾನಸ, ಶ್ರೀ ಅರವಿಂದ ಅವರ ಪುತ್ರ ಚಿ॥ ಅಥರ್ವ ಸುಬ್ರಹ್ಮಣ್ಯನ ನಾಮಕರಣವು ದಿನಾಂಕ 17-03-2019 ರಂದು ಘಾಟಿ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ನೆರವೇರಿತು.

**ಚಿ॥ ಅಥರ್ವ ಸುಬ್ರಹ್ಮಣ್ಯನಿಗೆ ಸಂಘದ ಆಶೀರ್ವಾದಗಳು**

### ಬ್ರಹ್ಮೋಪದೇಶ

* ಸಮುದಾಯದ ಶ್ರೀ ನಂದಕುಮಾರ್ ಹಾಗೂ ಶ್ರೀಮತಿ ರಾಜೇಶ್ವರಿ ಅವರ ಪುತ್ರ ಚಿ॥ ಸುಧನ್ವ ಎನ್. ಕುಮಾರ್‌ರವರ ಉಪನಯನವು ದಿನಾಂಕ 13-02-2019ರಂದು ನೆರವೇರಿತು.

### ಸಂಘದ ನೂತನ ಸದಸ್ಯರಿಗೆ – ಸ್ವಾಗತ

ಶ್ರೀಯುತ ಎ.ಜಿ. ರಘುನಂದನ್
ಶ್ರೀಯುತ ಮುರಳಿ ಅನಂತರಾಮ್
ಶ್ರೀಯುತ ಡಾ. ಎ.ಆರ್. ರಘು
ಶ್ರೀಯುತ ಕೆ.ವಿ. ರಾಧಾಕೃಷ್ಣ
ಶ್ರೀಯುತ ಡಿ.ಎ. ಸತೀಶ್ ಶರ್ಮಾ
ಶ್ರೀಮತಿ ಬಿ.ವಿ. ನಾಗಪದ್ಮಿನಿ

# ನೆನಪು – ಶ್ರದ್ಧಾಂಜಲಿ –

* **ಮುಂ**ಜಾನೆ ನಾಲ್ಕು ಘಂಟೆಗೆ ನಾನು ಬರೆಯುವುದಕ್ಕಾಗಿ ಎಚ್ಚರಗೊಂಡೆ. ನನ್ನ ಲೇಖನಿ ಇಡುವ ಪೆನ್ ಸ್ಟ್ಯಾಂಡ್‌ನಲ್ಲಿ ನಾಲ್ಕು ಬಣ್ಣಬಣ್ಣದ ಗುಲಾಬಿ ಹೂ, ಬಟ್ಟೆಯಲ್ಲಿ ಮಾಡಿದ್ದು ಇಟ್ಟಿದ್ದೆ. ಆ ಗುಲಾಬಿ ಹೂಗಳನ್ನು ನೋಡುತ್ತಿದ್ದಂತೆ ನನ್ನ ಮನಸ್ಸು ಒಂದು ವರುಷ ಹಿಂದಕ್ಕೆ ಹಕ್ಕಿಯಂತೆ ಹಾರಿಹೋಯಿತು...

ಸಂಕ್ರಾಂತಿ ಹಬ್ಬ 2018. ನನಗೆ ಅಕ್ಕ ತಂಗಿಯರಂತಿದ್ದ ವಿಜಯಲಕ್ಷ್ಮಮ್ಮ ಮತ್ತು ಪದ್ಮಮ್ಮನವರಿಗೆ ಎಳ್ಳು–ಬೆಲ್ಲ ಕೊಡಲು ಹೋಗಿದ್ದೆ. ಒಂದು ಘಂಟೆಯಕಾಲ ಅವರೊಡನೆ ಕಳೆದೆ. ಬೀಳ್ಕೊಂಡು ಹೊರಟಾಗ ಪದ್ಮಮ್ಮ ಬಟ್ಟೆಯಿಂದ ತಯಾರಿಸಿದ್ದ ನಾಲ್ಕು ಗುಲಾಬಿ ಹೂಗಳನ್ನು 'ನಾನು ಮಾಡಿದ್ದು, ತೊಗೊಳ್ಳಿ.' ಎಂದು ನನ್ನ ಕೈಯ್ಯಲ್ಲಿಟ್ಟರು. ಪ್ರೀತಿಯಿಂದ ನೀಡಲ್ಪಟ್ಟ ಅವುಗಳನ್ನು ಮನೆಗೆ ತಂದು ನನ್ನ ಪೆನ್ ಸ್ಟ್ಯಾಂಡ್‌ನಲ್ಲಿ ಜೋಪಾನವಾಗಿ ಇಟ್ಟೆ...

ಈ ವರುಷದ ಸಂಕ್ರಾಂತಿಯ ಸಮಯದಲ್ಲಿ ಎಳ್ಳು–ಬೆಲ್ಲ ವಿನಿಮಯ ಮಾಡಿಕೊಳ್ಳಲು ಅಕ್ಕ ತಂಗಿ ಇಬ್ಬರೂ ಇಲ್ಲ... ಕಣ್ಣಲ್ಲಿ ನೀರಾಡಿತು... 'ಇವಳು ನನ್ನ ಕಣ್ಣಮುಂದೆ ಹೋಗಬೇಕು.' ಎಂದು ವಿಜಯಲಕ್ಷ್ಮಮ್ಮ ಒಂದುಸಲ ನನ್ನಲ್ಲಿ ಹೇಳಿದ್ದರು. 2018 ಜೂನ್ ತಿಂಗಳಲ್ಲಿ ವಿಜಯಲಕ್ಷ್ಮಮ್ಮ ಪರಮಪದವನ್ನು ಪಡೆದರು. 2019 ಜನವರಿ ತಿಂಗಳಲ್ಲಿ ತಂಗಿಯನ್ನು ತಮ್ಮಲ್ಲಿಗೆ ಕರೆಸಿಕೊಂಡರು.

ಜೊತೆಯಲ್ಲಿ ಬೆಳೆದ ಅಕ್ಕ–ತಂಗಿಯರ ಅನ್ಯೋನ್ಯತೆ ಹೇಳತೀರದು. ಒಂದು ನಿಮಿಷವೂ ಒಬ್ಬರನ್ನೊಬ್ಬರು ಬಿಟ್ಟು ಅಗಲಿದವರಲ್ಲ. ಇಬ್ಬರನ್ನು ಸ್ಮರಿಸಿಕೊಂಡಾಗಲೆಲ್ಲಾ ನನಗೆ ಹಿರಿಯಕ್ಕನಂತಿದ್ದ ಎಂ.ಕೆ. ಇಂದಿರಾ ಅವರ 'ತುಂಗ–ಭದ್ರ' ನೆನಪಿಗೆ ಬರುತ್ತದೆ.

ಒಬ್ಬಳು ತಾಯಿ ಒಲೆಯ ಮುಂದೆ ಕುಳಿತು ರೊಟ್ಟಿ ಬಡಿಯುತ್ತಿದ್ದಳಂತೆ. ಅವಳ ಹತ್ತು ವರ್ಷದ ಮಗ ಬಂದು, 'ಅವ್ವಾ! ಕಡೇಕೇರಿಯ ಬಸವ್ವ ಸತ್ತೋದ್ಲು!' ಎಂದನಂತೆ. 'ಬಸವ್ವ ಸ್ವರ್ಗಕ್ಕೆ ಹೋದ್ಲೋ, ನರಕಕ್ಕೆ ಹೋದ್ಲೋ ನೋಡ್ಕೊಂಡು ಬಾ!' ಎಂದಳಂತೆ ರೊಟ್ಟಿ ಬಡಿಯುತ್ತಿದ್ದ ತಾಯಿ. ಹೊರಹೋದ ಮಗ ಕೊಂಚಹೊತ್ತಿಗೆ ವಾಪಸ್ಸು ಬಂದು,' ಅವ್ವಾ! ಬಸವ್ವ ಸ್ವರ್ಗಕ್ಕೆ ಹೋದ್ಲು!' ಎಂದನಂತೆ.

ಅಲ್ಲಿ ಇದ್ದ ಯಾರೋ 'ಇದೇನು?' ಎಂದು ಆಶ್ಚರ್ಯದಿಂದ ಕೇಳಿದಾಗ, 'ಅಯ್ಯೋ! ಪುಣ್ಯಾತ್ಮಳು ಇನ್ನೂ ಇರಬೇಕಿತ್ತು!' ಎಂದು ಯಾರ ಬಗ್ಗೆ ಜನ ಆಡಿಕೊಂಡಾರೋ ಅವರಿಗೆ ಸಿಗೋದು ಸ್ವರ್ಗಾನೇ! ಎಂದಳಂತೆ ತಾಯಿ. ಪರೋಪಕಾರಿಗಳಾಗಿ ಬದುಕಿದ್ದ ಜೀವಿಗಳು ವಿಜಯಲಕ್ಷ್ಮಮ್ಮ ಮತ್ತು ಪದ್ಮ ಅವರುಗಳು.

**ಲಲಿತಮ್ಮ ಚಂದ್ರಶೇಖರ್**
ಬೆಂಗಳೂರು



* **ಕಿತ್ತಿಗಾನಹಳ್ಳಿಯ ಶ್ರೀಯುತ ನಂಜುಂಡದೀಕ್ಷಿತರು** ಇತ್ತೀಚೆಗೆ ದೈವಾಧೀನರಾಗಿರುತ್ತಾರೆ. ಅವರ ನಿಧನ ತುಂಬಲಾರದ ನಷ್ಟವಾಗಿದೆ. ಶ್ರೀಯುತರು ಸಂಸ್ಕೃತದಲ್ಲಿ ಬಿ.ಎ. ಪದವಿಯನ್ನು ಪಡೆದು ನಂತರ ಇತಿಹಾಸ ವಿಷಯ ದಲ್ಲಿ ಎಂ.ಎ. ಪದವಿಯನ್ನು ಗಳಿಸಿದರು. ನಗರದ ಕ್ರೈಸ್ಟ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಇತ್ತೀಚೆಗೆ ನಿವೃತ್ತರಾಗಿದ್ದರು. ಇದಲ್ಲದೇ ಅವರು ಆಗಮ ವಿದ್ವಾಂಸರೂ, ವೇದಪಾರಂಗತರೂ ಆಗಿದ್ದವರು.

ತಂದೆಯವರು ಕಾಲವಶರಾದ ಮೇಲೆ ಅನೇಕ ಜವಾಬ್ದಾರಿಗಳು ಶ್ರೀಯುತರ ಹೆಗಲಿಗೇರಿದುವು. ಅವರು ಎಲ್ಲವನ್ನೂ ಧೈರ್ಯಸ್ಥೈರ್ಯದಿಂದ ಎದುರಿಸಿ ನಿರ್ವಹಿಸಿದರು. ತಮ್ಮ ಕಾಲದಲ್ಲಿ ಶ್ರೀಯುತರು ಅನೇಕಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನೇಕ ಜನೋಪಯೋಗಿ ಕಾರ್ಯಗಳನ್ನು ಸಾಧಿಸಿದರು. ಅವುಗಳನ್ನು ಇಲ್ಲಿ ತುಂಬು ಹೃದಯದಿಂದ ಸ್ಮರಿಸಿಕೊಳ್ಳೋಣ.

ಕಿತ್ತಿಗಾನಹಳ್ಳಿಯ ಶ್ರೀ ಶ್ರೀನಿವಾಸ ದೇವಾಲಯದ ಜೀರ್ಣೋದ್ಧಾರ, ವಿಮಾನಗೋಪುರ, ಮುಖಮಂಟಪ ಮತ್ತು ದೇವಾಲಯದ ಮುಂದಿನ ಗರುಡಗಂಬಗಳ ನಿರ್ಮಾಣ ಮತ್ತು ಹೊಸದಾಗಿ ರಥ ನಿರ್ಮಾಣ, ಸುಬ್ರಹ್ಮಣ್ಯ ದೇವಾಲಯ, ನವಗ್ರಹಗಳ ದೇವಾಲಯ ಹಾಗೂ ನಾಗರಕಟ್ಟೆಯ ಜೀರ್ಣೋದ್ಧಾರದ ಕಾರ್ಯಗಳು, ಲಕ್ಷ್ಮಿನಾರಾಯಣ ಸಮುದಾಯಭವನ ಎಂಬ ಹೆಸರಿನ ಕಲ್ಯಾಣಮಂಟಪದ ಜೀರ್ಣೋದ್ಧಾರ, ಬಿದಿರಕುಪ್ಪೆಯಲ್ಲಿ ರಥಗಾಯತ್ರಿ ದೇವಾಲಯ ಹಾಗೂ ಶ್ರೀ ನಂಜುಂಡೇಶ್ವರ ದೇವಾಲಯಗಳ ಅಭಿವೃದ್ಧಿ, ಅತ್ತಿಬೆಲೆಯಲ್ಲಿ ಶ್ರೀ ನಂಜುಂಡೇಶ್ವರ ದೇವಾಲಯದ ಜೀರ್ಣೋದ್ಧಾರ ಹಾಗೂ ಕಲ್ಯಾಣಮಂಟಪದ ನಿರ್ಮಾಣ. ಇವೆಲ್ಲ ಕಾರ್ಯಗಳಿಗೆ ದಿವಂಗತ ಶ್ರೀ ನಂಜುಂಡದೀಕ್ಷಿತರು ಅಪಾರ ಕೊಡುಗೆ ನೀಡಿದ್ದಾರೆ.

ಸಹನಶೀಲರೂ, ಮಿತಭಾಷಿಗಳೂ ಆಗಿದ್ದ ಶ್ರೀ ನಂಜುಂಡ ದೀಕ್ಷಿತರು ಕನ್ನಡ, ಇಂಗ್ಲೀಷ್ ಭಾಷೆಗಳಲ್ಲಿ ಪ್ರೌಢಿಮೆ ಗಳಿಸಿದ್ದವರು. ನನಗೆ ಒಳ್ಳೆಯ ಸ್ನೇಹಿತರೂ ಗುರುಗಳೂ ಆಗಿದ್ದವರು. ಶ್ರೀಯುತರ ನಿಧನ ನಮ್ಮೆಲ್ಲರಿಗೂ ದುಃಖವನ್ನುಂಟು ಮಾಡಿದೆ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸೋಣ.

**ಎಸ್. ಶ್ರೀನಿವಾಸಯ್ಯ ಕಿತ್ತಗಾನಹಳ್ಳಿ**

# ವಾರ್ತಾ ಚಿತ್ರಗಳು




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ ಮರುಚುನಾಯಿತರಾದ ಶ್ರೀ ಕೆ.ಎನ್. ವೆಂಕಟನಾರಾಯಣ ಅವರನ್ನು ಬೃಹಚ್ಚರಣ ಬ್ರಾಹ್ಮಣ ಸಂಘವು ಅಭಿನಂದಿಸುತ್ತದೆ.



ಸಂಘದ ಸದಸ್ಯ ಶ್ರೀ ಶ್ರೀರಾಮ್‌ರವರು ಕೆನಡಾದಲ್ಲಿ ಸಿ.ಪಿ.ಎ. ಪದವಿಗಳಿಸಿರುತ್ತಾರೆ. ಶ್ರೀಯುತರು ಸಂಘದ ಲೆಕ್ಕ ಪರಿಶೋಧಕ, ಪೋಷಕ ಶ್ರೀ ಬಿ.ಎನ್.ಜಿ.ಪ್ರಸಾದ್ ಹಾಗೂ ಶ್ರೀಮತಿ ಇಂದಿರಾ ಪ್ರಸಾದ್‌ರವರ ಪುತ್ರರು.

ಸಂಘವು ಶ್ರೀಯುತರನ್ನು ಅಭಿನಂದಿಸುತ್ತದೆ.



ನಮ್ಮ ಸಂಘದ ಹಿರಿಯ ಸದಸ್ಯರು ಹಾಗೂ ಸಂಘದ ಪತ್ರಿಕೆ "ಬೃಹಚ್ಚರಣ"ದ ಸಂಪಾದಕರಾದ ಶ್ರೀ ಕೆ.ಸಿ. ನಟರಾಜ್ ಅವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಕಾರ್ಯನಿರ್ವಾಹಕ ಸದಸ್ಯರಾಗಿ ನೇಮಿಸಲ್ಪಟ್ಟಿರುವುದಕ್ಕೆ ಕಾರ್ಯಕಾರಿ ಸಮಿತಿಯು ಶುಭ ಹಾರೈಸುತ್ತದೆ.



ಸಂಘದ ಪೋಷಕ ಸದಸ್ಯರಾದ ಶ್ರೀ ವೆಂಕಟಸುಬ್ಬರಾವ್ (ನಟರಾಜ್)ರವರು ತಮ್ಮ ಸಹೋದರ ದಿ|| ನಾಗರಾಜ್‌ರವರ ನೆನಪಿನಲ್ಲಿ ಸಂಘಕ್ಕೆ ರೂ.10,000/–ಗಳನ್ನು ದೇಣಿಗೆ ನೀಡಿರುತ್ತಾರೆ.

ಸಂಘವು ಶ್ರೀಯುತರಿಗೆ ಧನ್ಯವಾದಗಳನ್ನರ್ಪಿಸುತ್ತದೆ.



ಸಂಘದ ಸದಸ್ಯ ಡಾ. ಎಂ.ಎಸ್. ಶಶಿಕುಮಾರ್ ದೆಹಲಿ ಕರ್ನಾಟಕ ಸಂಘಕ್ಕೆ ಕಾರ್ಯಕಾರಿ ಸದಸ್ಯರಾಗಿ ಮರು ಆಯ್ಕೆಯಾಗಿದ್ದಾರೆ.

ಶ್ರೀಯುತರಿಗೆ ಸಂಘವು ಶುಭ ಹಾರೈಸುತ್ತದೆ.



ಸಂಘದ ಸದಸ್ಯರಾದ ಡಾ. ರಮಾದೇವಿ ಹಾಗೂ ಡಾ. ಗುರುಪ್ರಸಾದ್ ಅವರ ಪುತ್ರ ಚಿ|| ಆದಿತ್ಯ, ರಾಷ್ಟ್ರೀಯ ಕರಾಟೆ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನಗಳಿಸಿರುತ್ತಾರೆ.

ಸಂಘವು ಚಿ|| ಆದಿತ್ಯನಿಗೆ ಶುಭ ಹಾರೈಸುತ್ತದೆ.

## ಯುವ ಪ್ರತಿಭೆ

### ಚಿ|| ಜಯಂತ್









ನಮ್ಮ ಸಮುದಾಯದ ಶ್ರೀ ಎಸ್. ದ್ವಾರಕಾನಾಥ್ ಹಾಗೂ ಶ್ರೀಮತಿ ಲತಾರವರ ಪುತ್ರ ಚಿ|| ಜಯಂತ್ ಬಿ.ಕಾಂ. ಓದುತ್ತಿದ್ದು ತನ್ನ ಏಳನೇ ವಯಸ್ಸಿನಿಂದಲೇ ಸಂಗೀತವನ್ನು ವಿದುಷಿ ಶ್ರೀಮತಿ ಅನುಪಮಾ ಹಾಗೂ ವಿದುಷಿ ಶ್ರೀಮತಿ ಸಂಧ್ಯಾ ಮುರುಳಿಯವರಲ್ಲಿ ಅಭ್ಯಸಿಸಿದರು, ಅಂತೆಯೇ ಭರತನಾಟ್ಯವನ್ನು ವಿದುಷಿ ಶ್ರೀಮತಿ ಲಲಿತಾ ಶ್ರೀನಿವಾಸನ್‌ರವರಲ್ಲಿ ಅಭ್ಯಸಿಸುತ್ತಿದ್ದಾರೆ. ದಿನಾಂಕ 23–3–2019ರಂದು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ನಡೆದ ಚಿ|| ಜಯಂತ್ ಅವರ "ಅರೆಂಗೇಟ್ರಂ"ನ ಚಿತ್ರಗಳು.

**ಯುವ ಕಲಾವಿದ ಚಿ|| ಜಯಂತ್‌ಗೆ ಸಂಘದ ಶುಭಾಶಯಗಳು**



# ವಾರ್ತಾ ಚಿತ್ರಗಳು





ಭೂ ನೀಳಾ ಸಮೇತ ಶ್ರೀ ಶ್ರೀನಿವಾಸದೇವರ ಬ್ರಹ್ಮರಥೋತ್ಸವ, ಕಿತ್ತಿಗಾನಹಳ್ಳಿ ದಿನಾಂಕ 12–03–2019





ಶ್ರೀ ಕೋದಂಡರಾಮಸ್ವಾಮಿ ಬ್ರಹ್ಮರಥೋತ್ಸವ, ಸರ್ಜಾಪುರ





ಶ್ರೀ ಕಾಶೀವಿಶ್ವೇಶ್ವರಸ್ವಾಮಿ ಬ್ರಹ್ಮರಥೋತ್ಸವ, ದೊಮ್ಮಸಂದ್ರ


*If undelivered please return to :*
*President*
**'Bruhacharana Sangha'**
No. 8, 3rd Cross, Annaiyyappa
Block, Kumarapark West,
Bengaluru-560 020.


To,

Book-Post


Published by Sri S. Somasundara, President, 'BRUHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, Ph : 080-26722034